PRGI NO : KNKAN/26/A0884

ಈ ನಮ್ಮ

# ಧೃತಿ ನ್ಯೂಸ್

E NAMMA DHURTHI NEWS KANNADA DAILY NEWS PAPER

ಸದೃಢತೆಯ ಹೆಜ್ಜೆಯೊಂದಿಗೆ...., ಕನ್ನಡ ದಿನಪತ್ರಿಕೆ

- ಕೊಪ್ಪಳ
- ವಿಜಯನಗರ
- ರಾಯಚೂರು
- ಬಳ್ಳಾರಿ
- ಗದಗ
- ಬಾಗಲಕೋಟೆ
- ಹಾವೇರಿ
- ಧಾರವಾಡ

ಸಂಪಾದಕರು: ಚಂದ್ರಕಾಂತ | ಸಂಪುಟ: 01 ಸಂಚಿಕೆ: 174 ಪುಟಗಳು: 04 ಬೆಲೆ: 02 ದಿನಾಂಕ: 27-08-2026 ಗುರುವಾರ email: enammadhruthinews@gmail.com Pho : 7353595904

## ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಿಂದ ರೈತರಿಗೆ ಒಂದು ದಿನದ ತರಬೇತಿ

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳ ವತಿಯಿಂದ ಮಂಗಳವಾರದಂದು ಶ್ರೀ ಶರಣ ಶಿಕ್ಷಣ ಕೇಂದ್ರ, ಕೊಪ್ಪಳದಲ್ಲಿ ರಾಮದುರ್ಗ ತಾಲೂಕಿನಿಂದ ಆಗಮಿಸಿದ ರೈತರಿಗೆ ಒಂದು ದಿನದ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು.





ಈ ತರಬೇತಿಯಲ್ಲಿ ಸಮಗ್ರ ಕೃಷಿ ಕುರಿತು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾಧಿಕಾರಿ ಡಾ. ಬಿ.ಆರ್. ಬದ್ರಿ ಪ್ರಸಾದ್ ಅವರು ಮಾಹಿತಿ ನೀಡುತ್ತಾ ಅನೇಕ ಪ್ರಗತಿಪರ ರೈತರ ಉದಾಹರಣೆ ಮೂಲಕ ಸಮಗ್ರ ಕೃಷಿ ಮೌಲ್ಯವರ್ಧನೆ ಮತ್ತು ನಿರಂತರ ಆದಾಯದ ಕುರಿತು ಹಾಗೂ ಜೇನು ಸಾಕಾಣಿಕೆ ಕುರಿತು ಸಮಗ್ರ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕರಾದ ಶ್ರೀನಿವಾಸ ಕುಲಕರ್ಣಿರವರು ಮೀನು ಸಾಕಣೆ ಮತ್ತು ಇಲಾಖೆಯಲ್ಲಿನ ಯೋಜನೆಗಳ ಕುರಿತು ಮಾಹಿತಿ ನೀಡಿದರು. ನಿವೃತ್ತ ತೋಟಗಾರಿಕಾ ತಜ್ಞ ವಾಮನ ಮೂರ್ತಿ ಹಾಗೂ ಕೃಷಿ ತಂತ್ರಜ್ಞಾನ ಸಂಸ್ಥೆ ಕೊಪ್ಪಳ ಸದಸ್ಯರು ಸಮಗ್ರ ತೋಟಗಾರಿಕೆ ಕುರಿತು ಮಾಹಿತಿ ನೀಡಿದರು. ರಾಮದುರ್ಗ ತಾಲ್ಲೂಕಿನ ಕೃಷಿ ಇಲಾಖೆ ಆತ್ಮಯೋಜನೆಯ ರವಿ ಲಮಾಣಿ ಕಾರ್ಯಕ್ರಮವನ್ನು ನಿರೂಪಿಸಿದರು. ಪ್ರವೀಣ್ ವಂದಿಸಿದರು.

# ಮೇಕೆದಾಟು ಯೋಜನೆ ತಮಿಳುನಾಡಿಗೆ ಒಳಿತೇ ಹೊರತು ಮಾರಕವಲ್ಲ : ಡಿ.ಕೆ. ಶಿವಕುಮಾರ್

ಬೆಂಗಳೂರು: ಪ್ರಸ್ತಾವಿತ ಮೇಕೆದಾಟು ಅಣೆಕಟ್ಟು ಯೋಜನೆಯು ತಮಿಳುನಾಡಿನ ಹಿತಾಸಕ್ತಿ ಹಾಗೂ ಬೆಂಗಳೂರಿನ ಕುಡಿಯುವ ನೀರಿನ ಅಗತ್ಯಗಳನ್ನು ಸಮಾನವಾಗಿ ರಕ್ಷಿಸಲಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಇಂಡಿಯಾ ಟುಡೇ ರೌಂಡ್‌ಟೇಬಲ್ ಕರ್ನಾಟಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಮಿಳುನಾಡು ಮುಖ್ಯಮಂತ್ರಿ ವಿಜಯ್ ಅವರೊಂದಿಗೆ ಈ ಕುರಿತು ಚರ್ಚಿಸಿರುವುದಾಗಿ ತಿಳಿಸಿದರು. ಜೂನ್ 3ರಂದು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಅವರು ನೀಡಿದ ಮೊದಲ ಮಾಧ್ಯಮ ಸಂದರ್ಶನ ಇದಾಗಿದೆ. ಮೇಕೆದಾಟು ಯೋಜನೆಯಿಂದ ಸಂಗ್ರಹವಾಗುವ ನೀರಿನ ಶೇ.95ರಷ್ಟು ಭಾಗವನ್ನು ತಮಿಳುನಾಡಿನ ಬಳಕೆಗೆ ನೀಡಲಾಗುತ್ತದೆ. ಇದು ಆ ರಾಜ್ಯಕ್ಕೆ ಜೀವರಕ್ಷಕವಾಗಲಿದೆ. ಪ್ರವಾಹದ ಸಂದರ್ಭದಲ್ಲಿ ವ್ಯರ್ಥವಾಗಿ ಸಮುದ್ರಕ್ಕೆ ಹರಿದುಹೋಗುವ ನೀರನ್ನು ಸಂಗ್ರಹಿಸಲು ಈ ಯೋಜನೆ ಸಹಕಾರಿಯಾಗಲಿದೆ ಎಂದು ಅವರು ಹೇಳಿದರು.







ಈ ಜಲಾಶಯದ ನೀರನ್ನು ಕರ್ನಾಟಕವು ನೀರಾವರಿಗೆ ಬಳಸಿಕೊಳ್ಳಲು ಸಾಧ್ಯವಿಲ್ಲ. ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಕುಡಿಯುವ ನೀರಿನ ಅಗತ್ಯಕ್ಕಾಗಿ ನಿಗದಿಪಡಿಸಿರುವ 4.75 ಟಿಎಂಸಿ ನೀರನ್ನು ಮಾತ್ರ ಬಳಸಿಕೊಳ್ಳಲಾಗುತ್ತದೆ. ಸಾಮಾನ್ಯ ವರ್ಷಗಳಲ್ಲಿ ತಮಿಳುನಾಡಿಗೆ ಬಿಡುಗಡೆ ಮಾಡಬೇಕಾದ 177.25 ಟಿಎಂಸಿ ಕಾವೇರಿ ನೀರಿನ ಕುರಿತ ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಸಂಪೂರ್ಣವಾಗಿ ಗೌರವಿಸಿ, ಪಾಲಿಸಲಾಗುವುದು ಎಂದು ಶಿವಕುಮಾರ್ ಪುನರುಚ್ಚರಿಸಿದರು. ಅಂತರರಾಜ್ಯ ಜಲ ವಿವಾದಗಳನ್ನು ಕಾನೂನು ಹೋರಾಟದ ಮೂಲಕ ಬಗೆಹರಿಸುವುದಕ್ಕಿಂತ ಪರಸ್ಪರ ಮಾತುಕತೆಯ ಮೂಲಕ ಪರಿಹರಿಸಿಕೊಳ್ಳುವುದು ಉತ್ತಮ. ತುಂಗಭದ್ರಾ ನದಿ ನೀರಿನ ಹಂಚಿಕೆ ವಿಚಾರವಾಗಿ ಆಂಧ್ರಪ್ರದೇಶ ಹಾಗೂ ತೆಲಂಗಾಣ ಮುಖ್ಯಮಂತ್ರಿಗಳೊಂದಿಗೆ ನಡೆಸಿದ ಸಕಾರಾತ್ಮಕ ಮಾತುಕತೆಯ ಮಾದರಿಯನ್ನು ಮೇಕೆದಾಟು ವಿಚಾರದಲ್ಲೂ ಅನುಸರಿಸಬಹುದು ಎಂದರು.

**9 ಸಾವಿರ ಕೋಟಿ ರೂ. ಯೋಜನೆ**

ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಸುಮಾರು 9,000 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಮೇಕೆದಾಟು ಯೋಜನೆಯನ್ನು ರೂಪಿಸಲಾಗಿದೆ. 2019ರ ಬೆಲೆ ಆಧಾರದ ಮೇಲೆ ರೂಪಿಸಿರುವ ಈ ಬಹುಪಯೋಗಿ ಯೋಜನೆಯಡಿ 4.75 ಟಿಎಂಸಿ ಕುಡಿಯುವ ನೀರು ಒದಗಿಸುವುದರ ಜತೆಗೆ 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಲಾಗಿದೆ. ಆದರೆ, ಯೋಜನೆಯಿಂದ ತಮ್ಮ ನೀರಿನ ಪಾಲಿಗೆ ಧಕ್ಕೆಯಾಗಲಿದೆ ಎಂದು ತಮಿಳುನಾಡು ಸರ್ಕಾರ ನಿರಂತರವಾಗಿ ವಿರೋಧಿಸುತ್ತಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಕಾನೂನು ಹೋರಾಟದ ಜತೆಗೆ ನೆರೆ ರಾಜ್ಯದೊಂದಿಗೆ ಸೌಹಾರ್ದಯುತ ಮಾತುಕತೆ ನಡೆಸಿ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತಿದೆ.

# ಮೊಹಮ್ಮದ್ ಪೈಗಂಬರ್(ಸವ) ರವರ 1501 ಜನ್ಮದಿನೋತ್ಸವ ಸಂಭ್ರಮದಿಂದ ಆಚರಣೆ

ಧೃತಿ ನ್ಯೂಸ್ ಸುದ್ದಿ

ಯಲಬುರ್ಗಾ: ಶಾಂತಿ, ಸಹೋದರತೆ ಹಾಗೂ ಮಾನವೀಯತೆಯ ಸಂದೇಶ ಸಾರಿದ ಪ್ರವಾದಿ ಹಜರತ್ ಮೊಹಮ್ಮದ್ ಪೈಗಂಬರ್ ಅವರ 1501ನೇ ಜನ್ಮ ದಿನಾಚರಣೆಯನ್ನು ಯಲಬುರ್ಗಾ ನಗರದಲ್ಲಿ ಸಡಗರ, ಸಂಭ್ರಮ ಹಾಗೂ ಭಕ್ತಿಭಾವದಿಂದ ಆಚರಿಸಲಾಯಿತು.

ಆಗಸ್ಟ್ 25ರ ಮಂಗಳವಾರ ರಾತ್ರಿ ಸಾಮೂಹಿಕ ಪ್ರಾರ್ಥನೆಯೊಂದಿಗೆ ಈದ್ ಮೀಲಾದ್ ಆಚರಣೆಗೆ ಚಾಲನೆ ನೀಡಲಾಯಿತು. ಬಳಿಕ ಜಾಮಿಯಾ ಮಸೀದಿಯಲ್ಲಿ ಇಡೀ ರಾತ್ರಿ ಪ್ರವಾದಿಯವರ ಜೀವನ, ಆದರ್ಶಗಳು ಹಾಗೂ ಮಾನವೀಯ ಸಂದೇಶಗಳ ಕುರಿತು ಪ್ರವಚನ ನಡೆಯಿತು. ನಾತೆ ಶರೀಫ್‌ಗಳ ಮೂಲಕ ಪ್ರವಾದಿಯವರ ಗುಣಗಾನ ಮಾಡಲಾಯಿತು. ಬೆಳಗಿನ ಜಾವ ವಿಶೇಷ ಪ್ರಾರ್ಥನೆ ಸಲ್ಲಿಸಿದ ಬಳಿಕ ಜನ್ಮ ದಿನಾಚರಣೆಯ ಪ್ರಮುಖ ಕಾರ್ಯಕ್ರಮಗಳು ಆರಂಭಗೊಂಡವು. ನಂತರ ಜಾಮಿಯಾ ಮಸೀದಿಯಿಂದ ಭವ್ಯ ಮೆರವಣಿಗೆ ಆರಂಭವಾಯಿತು. ಸಾವಿರಾರು ಜನರು ಭಾಗವಹಿಸಿದ್ದ ಮೆರವಣಿಗೆಯಲ್ಲಿ ಪವಿತ್ರ ಮೆಕ್ಕಾ ಮತ್ತು ಮದೀನಾ ಕುರಿತ ಸ್ಥಬ್ಧಚಿತ್ರಗಳನ್ನು ಅಲಂಕರಿಸಿ ಭಕ್ತಿಯಿಂದ ಸಾಗಿಸಲಾಯಿತು. ನೂರಾರು ಮಕ್ಕಳು ವಿವಿಧ ವೇಷಭೂಷಣಗಳಲ್ಲಿ ಭಾಗವಹಿಸಿ ಪ್ರವಾದಿಯವರ ಶಾಂತಿ, ಪ್ರೀತಿ, ಸಹೋದರತೆ ಹಾಗೂ ಮಾನವೀಯತೆಯ ಸಂದೇಶಗಳನ್ನು ಸಾರಿದರು.



ಈ ಸಂದರ್ಭದಲ್ಲಿ ಸುಮಾರು 150 ಕೆ.ಜಿ. ತೂಕದ ಕೇಕ್ ತಯಾರಿಸಿ ಸಾರ್ವಜನಿಕರಿಗೆ ಹಂಚಲಾಯಿತು. ಮೆರವಣಿಗೆಯುದ್ದಕ್ಕೂ ವಿವಿಧ ಬಗೆಯ ಸಿಹಿ ತಿಂಡಿಗಳನ್ನು ವಿತರಿಸುವ ಮೂಲಕ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಜಾಮಿಯಾ ಮಸೀದಿಯಿಂದ ಹೊರಟ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಬಾಬಾ ಅಷರಫ್ ಅಲಿ ದರ್ಗಾ ತಲುಪಿತು. ದರ್ಗಾದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದ ಬಳಿಕ ಮೆರವಣಿಗೆ ಮುಂದುವರಿದು ಚೆನ್ನಮ್ಮ ವೃತ್ತ, ಕನಕದಾಸ ವೃತ್ತ ಹಾಗೂ ಟಿಪ್ಪು ಸುಲ್ತಾನ್ ವೃತ್ತ ತಲುಪಿತು. ಟಿಪ್ಪು ಸುಲ್ತಾನ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದ ನಂತರ ಮೆರವಣಿಗೆ ಮರಳಿ ಜಾಮಿಯಾ ಮಸೀದಿಗೆ ಆಗಮಿಸಿತು. ಮಸೀದಿಯಲ್ಲಿ ಸಾರ್ವಜನಿಕರಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಮೆರವಣಿಗೆಯಲ್ಲಿ ಪಾಲ್ಗೊಂಡ ಜನರು ಪ್ರಸಾದ ಸ್ವೀಕರಿಸಿ ಕಾರ್ಯಕ್ರಮವನ್ನು ಸಂಪನ್ನಗೊಳಿಸಿದರು. ಮೆರವಣಿಗೆಯಲ್ಲಿ ಜಾಮಿಯಾ ಮಸೀದಿ ಕಮಿಟಿ, ಬಾಬಾ ಅಷರಫ್ ಅಲಿ ದರ್ಗಾ ಕಮಿಟಿ ಸದಸ್ಯರು ಹಾಗೂ ಯಲಬುರ್ಗಾ ಮುಸ್ಲಿಂ ಸಮಾಜದ ಮುಖಂಡರಾದ ಬಾಬುಸಾಬ್ ಕುಂದಗೋಳ, ಅಕ್ತರ್‌ಸಾಬ್ ಖಾಜಿ, ಮಹಿಮೂದಮಿಯಾ ಖಾಜಿ, ಎಂ. ಎಫ್. ನದಾಫ್, ಆಯುಬ್‌ಸಾಬ್ ಕೊಪ್ಪಳ, ಕಾಶಿಮಅಲಿ ಮಾನ್ವಿ, ಮಹಿಬೂಬಸಾಬ್ ಇಟಗಿ, ಹಾಜಿಮಲಂಗ ಬಾಬಾ ಮಾನ್ವಿ, ಮುರ್ತುಜಾಸಾಬ್ ಕೊಪ್ಪಳ, ಮೈಬೂಬ್‌ಸಾಬ್ ಕನಕಗಿರಿ, ಭಾಷಾಸಾಬ್ ಕನಕಗಿರಿ, ಗೌಸುಸಾಬ್ ಕನಕಗಿರಿ, ಸಾಧಿಕ್ ಮಕಾಂದಾರ್, ಮಹಿಬೂಬಸಾಬ್ ಮಕಾನದಾರ್, ಫಾಶಸಾಬ್ ಹುರಕಡ್ಲಿ, ಶರೀಫ್ ಕೋತ್ವಾಲ್, ರಿಯಾಜ್ ನಾಲಬಂದ, ಮಹಮ್ಮದ್ ರಫೀಕ್ ಕೊಪ್ಪಳ, ಶಾಮಿದ್ ಆನೆಗುಂದಿ, ಮಹಿಬೂಬ್‌ಸಾಬ್ ಕೊಪ್ಪಳ, ಬಾಬಾ ಮನಿಯಾರ್, ಜಂದಿಸಾಬ್ ಮನಿಯಾರ್, ಹುಸೇನ್ ಖಾನ್ ಗಡಾದ, ಅಜಮೀರ್ ಹಿರೇಮನಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಈದ್ ಮೀಲಾದ್ ಆಚರಣೆಯು ನಗರದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಸಹೋದರತ್ವದ ಸಂದೇಶವನ್ನು ಸಾರುವ ಮೂಲಕ ಗಮನ ಸೆಳೆಯಿತು.

# ಮುಹಮ್ಮದ್ ಪೈಗಂಬರ್ ಆದರ್ಶ ತತ್ವಗಳನ್ನು ಅಳವಡಿಸಿಕೊಳ್ಳಿ : ಅಲ್ಲಾವುದ್ದೀನ ಯಮ್ಮಿ

ಧೃತಿ ನ್ಯೂಸ್ ಸುದ್ದಿ

ಕುಕನೂರು: ಮುಹಮ್ಮದ್ ಪೈಗಂಬರ್ ಅವರ ಆದರ್ಶ ತತ್ವಗಳು ಮತ್ತು ಕರುಣೆ, ಮಮತೆ,ಮಮಕಾರ, ಪರಸ್ಪರ ಪ್ರೀತಿ ವಿಶ್ವಾಸದ ಸಂಕೇತವಾಗಿ ಇಡೀ ವಿಶ್ವಕ್ಕೆ ಮಾದರಿಯಾಗಿದ್ದಾರೆ, ಮುಹಮ್ಮದ್ ಪೈಗಂಬರ್ ಅವರ ಆದರ್ಶ ತತ್ವಗಳನ್ನು ಅಳವಡಿಸಿಕೊಳ್ಳಿ, ಎಂದು ಹಿರಿಯ ಪತ್ರಕರ್ತ ಅಲ್ಲಾವುದ್ದೀನ ಯಮ್ಮಿ ನುಡಿದರು.

ಸ್ಥಳೀಯ ವೃದ್ಧಾಶ್ರಮದಲ್ಲಿ ಮುಹಮ್ಮದ್ ಪೈಗಂಬರ್ ಅವರ ದಿನಾಚರಣೆಯ ಅಂಗವಾಗಿ ಅಂಜುಮನ್ ಕಮೀಟಿಯ ಯುವಕರು ಆಯೋಜಿಸಿದ್ದ ವೃದ್ಧರಿಗೆ ಊಟ ಹಾಗೂ ಹಣ್ಣು, ಬಿಸ್ಕತ್ತುಗಳನ್ನು ನೀಡಿ ಮಾತನಾಡಿದ ಅವರು ಮುಹಮ್ಮದ್ ಪೈಗಂಬರ್ ಅವರ ಜೀವನ ಸಂದೇಶ ಎಲ್ಲ ಕಾಲಕ್ಕೂ ಸಲ್ಲುವ ದಾರಿ ದೀಪವಾಗಿವೆ. ಕಾಲ ಕಾಲಕ್ಕೆ ಜಗತ್ತಿನಲ್ಲಿ ಮನುಷ್ಯ ಪ್ರೇಮ ದಾರಿ ತಪ್ಪಿದಾಗ, ಮನುಷ್ಯ ಮನುಷ್ಯರ ನಡುವೆ ಕಂದಕ ಸೃಷ್ಟಿಯಾದಾಗ, ನೈತಿಕ ಮೌಲ್ಯಗಳು ನೆಲ ಕಚ್ಚಿ ಹೋದಾಗ, ಮನುಷ್ಯ ಧರ್ಮ ಅಧಃಪತನದ ದಾರಿ ಹಿಡಿದಾಗ ಅನೇಕ ಸೂಫಿ, ಸಂತರು ಭುವಿಗವತರಿಸಿ ಮನುಷ್ಯ ಧರ್ಮದ ಜಾಗೃತಿ ಮೂಡಿಸುವಲ್ಲಿ ಶ್ರಮಿಸಿದ್ದಾರೆ.

ನೈ ಕ ಮೌಲ್ಯಗಳ ಕುಸಿತ ತಡೆಗಟ್ಟುವಲ್ಲಿ,ಆಯಾಕಾಲದಲ್ಲಿ ಹುಟ್ಟಿ ಬೆಳೆದು, ತಮ್ಮ ಬದುಕನ್ನೇ ಸವಿಸಿದ್ದಾರೆ., ಜನರನ್ನು ಅಜ್ಞಾನದ ಕತ್ತಲೆಯಿಂದ



ಬೆಳಕಿನೆಡೆಗೆ ದಾರಿತೋರುವ ಆಪತ್ಬಾಂಧವರ ,ಮಹಾತ್ಮರ ಜೀವಂತ ಉದಾಹರಣೆಗಳು ಕಣ್ಣ ಮುಂದಿನ ಬೆಳಕಿನಂತೆ ಇತಿಹಾಸಗಳಲ್ಲಿ ಹಚ್ಚ ಹಸಿರಾಗಿ ಗೋಚರಿಸುತ್ತಿವೆ. ಅಂತಹ ಆಪತ್ಬಾಂಧವರಲ್ಲಿ ಮುಂಚೂಣಿಯಲ್ಲಿರುವವರು ಮೊಹಮ್ಮದ್ ಪೈಗಂಬರ್ ಅವರು. ಎಂದರು.

ಅಂಜುಮನ್ ಕಮೀಟಿಯ ಅಧ್ಯಕ್ಷ ರಷೀದ್ ಅಹ್ಮದ್ ಹಣಜಿಗಿರಿ ಮಾತನಾಡಿ ಮೊಹಮ್ಮದ್ ಪೈಗಂಬರ್ ಅವರು, ಜಗತ್ತಿನಲ್ಲಿ ಸಮಾನತೆ ಸಾರಿದವರು, ಒಂದಿಡೀ ವಿಶ್ವದ ಅನ್ಯಾಯ, ಅನೀತಿ, ಅಧರ್ಮದ ವಿರುದ್ಧ ಮನುಷ್ಯ ಧರ್ಮದ ನೆಲಗಟ್ಟಿನ ಮೇಲೆ ರಕ್ಕಸರನ್ನು ಕೂಡ ಪ್ರೇಮ, ಭಾವ ತುಂಬಿದ ನಿಜ ಮನುಷ್ಯರನ್ನಾಗಿ ಪ್ರೇರೇಪಿಸಿದ ಮಹಾನ್ ಮಾನವತಾವಾದಿಗಳು, ವಿಶ್ವದ ಸಂತರು, ಜೀವ ಕಾರುಣ್ಯದ ಒಡಲು, ಪ್ರೇಮದ ಕಡಲು, ಪ್ರವಾದಿ ಮುಹಮ್ಮದ್ ಪೈಗಂಬರ್ ರು ಎಂದರು. ಎಲ್ಲರಿಗೂ ಮೊಹಮ್ಮದ್ ಪೈಗಂಬರ್ ರವರ ಜನ್ಮ ದಿನದ ಶುಭಾಶಯಗಳು ಎಂದರು.

ಈ ಸಂದರ್ಭದಲ್ಲಿ ಮಾಜಿ ಅಂಜುಮನ್ ಕಮೀಟಿ ಅಧ್ಯಕ್ಷ ರಷೀದ್ ಸಾಬ ಮುಬಾರಕ್, ಮೂಮಿನ್,ಮೌಲಾಸಾಬ ಕೊಪ್ಪಳ, ಬಾಷಾ ಡಂಬಳ, ಉಪಾಧ್ಯಕ್ಷ ರಹೀಮಾನ್ ಸಾಬ್ ಮಕ್ಕಪ್ಪನವರ್, ಗುಡೂಷಾ ಮಕಾನದಾರ, ಹಾಜಿ ಲಾಲ್ ಸಾಬ್ ಗುಡಿಹಿಂದಲ್, ಮೆಹಬೂಬ್ ಗುಡಿಹಿಂದಲ್, ಮೆಹಬೂಬ್ ಪಾಷಾ ಕೊಪ್ಪಳ, ಮೊಹಮ್ಮದ್ ಗದ್ವಾಲ್, ಫಾರೂಕ್ ಬಳ್ಳಾರಿ, ಸಾಧೀಕ್ ಪಾಷಾ ಖಾಜಿ, ರಾಜಾಸಾಬ್ ದಫೇದಾರ್, ಅಜರುದ್ದೀನ್ ದ್ಯಾಂಪೂರ, ಚಾಂದ್ ಹುಸೇನ್ ಗಾಂಜಿ, ಶಫೀ ಯಮ್ಮಿ,ಮೌಲಾಸಾಬ ಮಕಾನದಾರ(ಮೇಸ್ತ್ರಿ) ಹುಸೇನ್ ಸಾಬ್ ನದಾಫ್ ಮುಂತಾದವರು ಉಪಸ್ಥಿತರಿದ್ದರು.



ಧೃತಿ ನ್ಯೂಸ್ ಸುದ್ದಿ

ಬುಧವಾರ ಕೊಪ್ಪಳ ನಗರದಲ್ಲಿ ಈದ್ ಮಿಲಾದ್-ಉನ್-ನಬಿ ಪ್ರಯುಕ್ತ ಆಯೋಜನೆಗೊಂಡಿದ್ದ ಮೆರವಣಿಗೆಯಲ್ಲಿ ಜೆಡಿ-ಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ ವಿ ಚಂದ್ರಶೇಖರ್, ಜಿಲ್ಲಾ ಅಧ್ಯಕ್ಷ ಸುರೇಶ್ ಭೂಮರಡ್ಡಿ, ಕೊಪ್ಪಳ ತಾಲೂಕು ಘಟಕದ ಅಧ್ಯಕ್ಷ ವಿರೇಶಗೌಡ್ರ ದಳಪತಿ, ನಗರ ಘಟಕದ ಅಧ್ಯಕ್ಷ ಸೋಮುನಗೌಡ ಹೊಗರನಾಳ, ಕೊಪ್ಪಳ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಶಿವಕುಮಾರ ಏಣಿಗಿ, ಜಿಲ್ಲಾ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸಿರಾಜ್ ಬಿಜಾಪುರ್, ನಗರ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸಿರಾಜ್ ಕೋಲ್ಕಾರ್, ಕ್ರೀಡಾ ವಿಭಾಗದ ಅಧ್ಯಕ್ಷ ಸೈಯದ್ ಮೆಹಮೂದ್ ಹುಸೇನಿ ಬಲ್ಲೆ, ಜಿಲ್ಲಾ ಎಸ್ ಸಿ ಘಟಕದ ಅಧ್ಯಕ್ಷ ಶಾಂತಕುಮಾರ ದೊಡ್ಡಮನಿ, ಜಿಲ್ಲಾ ಯುವ ಘಟಕದ ಮುಖಂಡ ಸಲೀಂ ಸಾಬ್, ನಗರ ಘಟಕದ ಯುವ ಮುಖಂಡ ಪ್ರವೀಣ ಇಟಗಿ ಸೇರಿದಂತೆ ಇತರೆ ಮುಖಂಡರು ಹಾಗೂ ಕಾರ್ಯಕರ್ತರು ಹಾಜರಿದ್ದರು.

# ಮುಹಮ್ಮದ್ ಪೈಗಂಬರ್ ಆದರ್ಶ ತತ್ವಗಳನ್ನು ಅಳವಡಿಸಿಕೊಳ್ಳಿ : ಅಲ್ಲಾವುದ್ದೀನ ಯಮ್ಮಿ

ಧೃತಿ ನ್ಯೂಸ್ ಸುದ್ದಿ

ಕುಕನೂರು: ಮುಹಮ್ಮದ್ ಪೈಗಂಬರ್ ಅವರ ಆದರ್ಶ ತತ್ವಗಳು ಮತ್ತು ಕರುಣೆ, ಮಮತೆ,ಮಮಕಾರ, ಪರಸ್ಪರ ಪ್ರೀತಿ ವಿಶ್ವಾಸದ ಸಂಕೇತವಾಗಿ ಇಡೀ ವಿಶ್ವಕ್ಕೆ ಮಾದರಿಯಾಗಿದ್ದಾರೆ, ಮುಹಮ್ಮದ್ ಪೈಗಂಬರ್ ಅವರ ಆದರ್ಶ ತತ್ವಗಳನ್ನು ಅಳವಡಿಸಿಕೊಳ್ಳಿ, ಎಂದು ಹಿರಿಯ ಪತ್ರಕರ್ತ ಅಲ್ಲಾವುದ್ದೀನ ಯಮ್ಮಿ ನುಡಿದರು. ಸ್ಥಳೀಯ ವೃದ್ಧಾಶ್ರಮದಲ್ಲಿ ಮುಹಮ್ಮದ್ ಪೈಗಂಬರ್ ಅವರ ದಿನಾಚರಣೆಯ ಅಂಗವಾಗಿ ಅಂಜುಮನ್ ಕಮೀಟಿಯ ಯುವಕರು ಆಯೋಜಿಸಿದ್ದ ವೃದ್ಧರಿಗೆ ಊಟ ಹಾಗೂ ಹಣ್ಣು, ಬಿಸ್ಕತ್ತು ಗಳನ್ನು ನೀಡಿ ಮಾತನಾಡಿದ ಅವರು ಮುಹಮ್ಮದ್ ಪೈಗಂಬರ್ ಅವರ ಜೀವನ ಸಂದೇಶ ಎಲ್ಲ ಕಾಲಕ್ಕೂ ಸಲ್ಲುವ ದಾರಿ ದೀಪವಾಗಿವೆ.

ಕಾಲ ಕಾಲಕ್ಕೆ ಜಗತ್ತಿನಲ್ಲಿ ಮನುಷ್ಯ ಪ್ರೇಮ ದಾರಿ ತಪ್ಪಿದಾಗ, ಮನುಷ್ಯ ಮನುಷ್ಯರ ನಡುವೆ ಕಂದಕ ಸೃಷ್ಟಿಯಾದಾಗ, ನೈತಿಕ ಮೌಲ್ಯಗಳು ನೆಲ ಕಚ್ಚಿ ಹೋದಾಗ, ಮನುಷ್ಯ



ಧರ್ಮ ಅಧಃಪತನದ ದಾರಿ ಹಿಡಿದಾಗ ಅನೇಕ ಸೂಫಿ, ಸಂತರು ಭುವಿಗವತರಿಸಿ ಮನುಷ್ಯ ಧರ್ಮದ ಜಾಗೃತಿ ಮೂಡಿಸುವಲ್ಲಿ ಶ್ರಮಿಸಿದ್ದಾರೆ. ನೈತಿಕ ಮೌಲ್ಯಗಳ ಕುಸಿತ ತಡೆಗಟ್ಟುವಲ್ಲಿ , ಆಯಾಕಾಲದಲ್ಲಿ ಹುಟ್ಟಿ ಬೆಳೆದು, ತಮ್ಮ ಬದುಕನ್ನೇ ಸವಿಸಿದ್ದಾರೆ.

ಜನರನ್ನು ಅಜ್ಞಾನದ ಕತ್ತಲೆಯಿಂದ ಬೆಳಕಿನೆಡೆಗೆ ದಾರಿತೋರುವ ಆಪತ್ಬಾಂಧವರ ,ಮಹಾತ್ಮರ ಜೀವಂತ ಉದಾಹರಣೆಗಳು ಕಣ್ಣ ಮುಂದಿನ ಬೆಳಕಿನಂತೆ ಇತಿಹಾಸಗಳಲ್ಲಿ ಹಚ್ಚ ಹಸಿರಾಗಿ ಗೋಚರಿಸುತ್ತಿವೆ. ಅಂತಹ ಆಪತ್ಬಾಂಧವರಲ್ಲಿ ಮುಂಚೂಣಿಯಲ್ಲಿರುವವರು ಮೊಹಮ್ಮದ್ ಪೈಗಂಬರ್ ಅವರು. ಎಂದರು. ಅಂಜುಮನ್ ಕಮೀಟಿಯ ಅಧ್ಯಕ್ಷ ಚಿರಷೀದ್ ಅಹ್ಮದ್ ಹಣಜಿಗಿರಿ ಮಾತನಾಡಿ ಮೊಹಮ್ಮದ್ ಪೈಗಂಬರ್ ಅವರು, ಜಗತ್ತಿನಲ್ಲಿ ಸಮಾನತೆ ಸಾರಿದವರು, ಒಂದಿಡೀ ವಿಶ್ವದ ಅನ್ಯಾಯ, ಅನೀತಿ, ಅಧರ್ಮದ ವಿರುದ್ಧ ಮನುಷ್ಯ ಧರ್ಮದ ನೆಲಗಟ್ಟಿನ ಮೇಲೆ ರಕ್ಕಸರನ್ನು ಕೂಡ ಪ್ರೇಮ, ಭಾವ ತುಂಬಿದ ನಿಜ ಮನುಷ್ಯರನ್ನಾಗಿ ಪ್ರೇರೇಪಿಸಿದ ಮಹಾನ್ ಮಾನವತಾವಾದಿಗಳು, ವಿಶ್ವದ ಸಂತರು,ಜೀವ ಕಾರುಣ್ಯದ ಒಡಲು, ಪ್ರೇಮದ ಕಡಲು ,ಪ್ರವಾದಿ ಮುಹಮ್ಮದ್ ಪೈಗಂಬರ್ ರು ಎಂದರು. ಎಲ್ಲರಿಗೂ ಮೊಹಮ್ಮದ್ ಪೈಗಂಬರ್ ರವರ ಜನ್ಮ ದಿನದ ಶುಭಾಶಯಗಳು ಎಂದರು.

ಈ ಸಂದರ್ಭದಲ್ಲಿ ಮಾಜಿ ಅಂಜುಮನ್ ಕಮೀಟಿ ಅಧ್ಯಕ್ಷ ರಷೀದ್ ಸಾಬ ಮುಬಾರಕ್, ಮೂಮಿನ್,ಮೌಲಾಸಾಬ ಕೊಪ್ಪಳ,ಬಾಷಾ ಡಂಬಳ, ಉಪಾಧ್ಯಕ್ಷ ರಹೀಮಾನ್ ಸಾಬ್ ಮಕ್ಕಪ್ಪನವರ್, ಗುಡೂಷಾ ಮಕಾನದಾರ, ಹಾಜಿ ಲಾಲ್ ಸಾಬ್ ಗುಡಿಹಿಂದಲ್, ಮೆಹಬೂಬ್ ಗುಡಿಹಿಂದಲ್, ಮೆಹಬೂಬ್ ಪಾಷಾ ಕೊಪ್ಪಳ, ಮೊಹಮ್ಮದ್ ಗದ್ವಾಲ್, ಫಾರೂಕ್ ಬಳ್ಳಾರಿ, ಸಾಧೀಕ್ ಪಾಷಾ ಖಾಜಿ, ರಾಜಾಸಾಬ್ ದಫೇದಾರ್, ಅಜರುದ್ದೀನ್ ದ್ಯಾಂಪೂರ, ಚಾಂದ್ ಹುಸೇನ್ ಗಾಂಜಿ,ಶಫೀ ಯಮ್ಮಿ,ಮೌಲಾಸಾಬ ಮಕಾನದಾರ(ಮೇಸ್ತ್ರಿ) ಹುಸೇನ್ ಸಾಬ್ ನದಾಫ್ ಮುಂತಾದವರು ಉಪಸ್ಥಿತರಿದ್ದರು.

## ಅಂಚೆ ಇಲಾಖೆಯಿಂದ ವಿವಿಧ ಖಾಲಿ ಹುದ್ದೆಗೆ ಅರ್ಜಿ ಆಹ್ವಾನ

ರಾಯಚೂರು: ಭಾರತೀಯ ಅಂಚೆ ಇಲಾಖೆಯ ರಾಯಚೂರು ಅಂಚೆ ವಿಭಾಗೀಯ ವ್ಯಾಪ್ತಿಯ ವಿವಿಧ ಅಂಚೆ ಕಚೇರಿಗಳಲ್ಲಿ ಖಾಲಿ ಇರುವ ಗ್ರಾಮೀಣ ಡಾಕ್ ಸೇವಕ, ಶಾಖಾ ಅಂಚೆ ಪಾಲಕ ಮತ್ತು ಸಹಾಯಕ ಶಾಖಾ ಅಂಚೆ ಪಾಲಕ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

10ನೇ ತರಗತಿ ಅಂಕಗಳ ಆಧಾರದ ಮೇಲೆ ಒಟ್ಟು 27 ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗುತ್ತದೆ. ಆಗಸ್ಟ್ 31 ರಿಂದ ಸೆಪ್ಟೆಂಬರ್ 19 ರವರೆಗೂ ಅನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ಮತ್ತು ಶುಲ್ಕ ಪಾವತಿಗೆ ಸೆಪ್ಟೆಂಬರ್ 2 ರಿಂದ 21 ರವರಿಗೆ ನೋಂದಣಿಗೆ ಅವಕಾಶ ನೀಡಲಾಗಿದೆ. ಆಸಕ್ತರು ಇಲಾಖೆಯ ಅಧಿಕೃತ ಪೋರ್ಟಲ್ ವಿಳಾಸ: https:/In-diapost.gov.ingdsonlineenagement ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ರಾಯಚೂರು ವಿಭಾಗೀಯ ಅಂಚೆಯ ಅಧೀಕ್ಷಕರ ಕಚೇರಿಯನ್ನು ಸಂಪರ್ಕ ಮಾಡಬಹುದಾಗಿದೆ ಎಂದು ರಾಯಚೂರು ಅಂಚೆ ವಿಭಾಗೀಯ ಅಂಚೆ ಅಧೀಕ್ಷಕರಾದ ಶಿವಾನಂದ ಆರ್.ಎಚ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಿಲ್ಲಾಡಳಿತದಿಂದ ಆಗಸ್ಟ್ 28ರಂದು ನೂಲಿಯ ಚಂದಯ್ಯ ಜಯಂತಿ

ರಾಯಚೂರು: ರಾಯಚೂರಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನೂಲಿಯ ಚಂದಯ್ಯ ಜಯಂತಿ ಕಾರ್ಯಕ್ರಮವನ್ನು ಆಗಸ್ಟ್ 28ರ ಬೆಳಿಗ್ಗೆ 11ಕ್ಕೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಅಜಯ್ ಧರ್ಮಸಿಂಗ್ ಅವರು ಉದ್ಘಾಟನೆ ನೆರವೇರಿಸುವರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶಿವರಾಜ ಎಸ್.ತಂಗಡಗಿ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ಎಸ್.ಸಿ, ಎಸ್.ಟಿ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ ಜಿ. ಅವರು ಘನ ಉಪಸ್ಥಿತಿ ವಹಿಸುವರು. ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎನ್.ಎಸ್.ಬೋಸರಾಜು, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಎಸ್.ಎಸ್.ನಕುಲ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಶು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಬಾಗಿಯಾಗಲಿದ್ದಾರೆ. ನೂಲಿಯ ಚಂದಯ್ಯ ಜಯಂತಿ ಕುರಿತು ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್ ಡಾ.ಜಾಗೃತಿ ದೇಶಮಾನ್ಯ ಅವರು ಉಪನ್ಯಾಸ ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶ್ರೀಕೃಷ್ಣ ಜಯಂತಿಕಾರ್ಯಕ್ರಮದ ನಿಮಿತ್ಯ ಪೂರ್ವಭಾವಿ ಸಭೆ

ಗದಗ: ಸರ್ಕಾರದ ಆದೇಶದನ್ವಯ ಪ್ರತಿ ವರ್ಷದಂತೆ ಈ ವರ್ಷವು ಸಪ್ಟಂಬರ್ 04 ರಂದು ಆಚರಿಸಲಾಗುವ ಶ್ರೀಕೃಷ್ಣ ಜಯಂತಿಕಾರ್ಯಕ್ರಮದ ನಿಮಿತ್ಯ ಆಗಸ್ಟ್ 27 ರಂದು ಗುರುವಾರ ಬೆಳಗ್ಗೆ 11 ಗಂಟೆಗೆ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಸವರಾಜ ವ್ಹಿ.ಬಳ್ಳಾರಿ ತಿಳಿಸಿದ್ದಾರೆ.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

# ಹಿರಿಯ ಶಾಸಕರ ಬಂಡಾಯ ತಣಿಸಲು ಮತ್ತೆ ಸಂಪುಟ ಪುನಾರಚನೆ

ಬೆಂಗಳೂರು: ಹಿರಿಯ ಶಾಸಕರು ಬಂಡಾಯದ ಬಾವುಟ ಹಿಡಿದಿರುವ ಹಿನ್ನೆಲೆಯಲ್ಲಿ ಕೆಲವರನ್ನು ಸಮಾಧಾನಪಡಿಸಲು ಸಂಪುಟದಲ್ಲಿರುವ ಕೆಲವು ಹಿರಿಯ ಸಚಿವರನ್ನು ಕೈಬಿಟ್ಟು ಅಸಮಾಧಾನಿತ ಶಾಸಕರಿಗೆ ಅವಕಾಶ ಕಲ್ಪಿಸುವ ಕುರಿತು ಚರ್ಚೆಗಳು ನಡೆಯುತ್ತಿವೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗುರುವಾರ ದೆಹಲಿಗೆ ತೆರಳುವ ಸಾಧ್ಯತೆಯಿದ್ದು, ಹೈಕಮಾಂಡ್ ನಾಯಕರೊಂದಿಗೆ ಸಚಿವ ಸಂಪುಟ ಪುನಾರಚನೆ, ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ಸದಸ್ಯರ ನಾಮನಿರ್ದೇಶನ, ನಿಗಮ-ಮಂಡಳಿಗಳ ಅಧ್ಯಕ್ಷರು ಹಾಗೂ ನಿರ್ದೇಶಕರ ಆಯ್ಕೆ, ಜಿಲ್ಲಾಧ್ಯಕ್ಷರ ನೇಮಕ ಮತ್ತು 100 ಕಾಂಗ್ರೆಸ್ ಕಚೇರಿಗಳ ಶಂಕುಸ್ಥಾಪನೆ ಸೇರಿದಂತೆ ಹಲವು ಮಹತ್ವದ ವಿಚಾರಗಳ ಕುರಿತು ಚರ್ಚೆ ನಡೆಸಲಿದ್ದಾರೆ ಎಂದು ತಿಳಿದುಬಂದಿದೆ. ಸದ್ಯ ಸಂಪುಟದಲ್ಲಿ 33 ಸಚಿವರಿದ್ದು, ಒಂದು ಸ್ಥಾನ ಖಾಲಿ ಉಳಿದಿದೆ. ಈ ಸ್ಥಾನ ಭರ್ತಿ ಮಾಡುವುದು ಕಗ್ಗಂಟಾಗಿದೆ. ಕಾಂಗ್ರೆಸ್‌ನ ಶಾಸಕರಾದ ಲಕ್ಷ್ಮೀ ಹೆಬ್ಬಾಳ್ಕರ್, ಖನೀಜ್ ಫಾತಿಮಾ, ನಯನ ಮೋಟಮ್ಮ, ಅನ್ನಪೂರ್ಣ ತುಕಾರಾಂ ಹಾಗೂ ವಿಧಾನ ಪರಿಷತ್ ಸದಸ್ಯರಾದ ಗಾಯತ್ರಿ ಶಾಂತೇಗೌಡ, ಆರತಿ ಕೃಷ್ಣ, ಬಲ್ಕೀಸ್ ಬಾನು ಸೇರಿದಂತೆ ಹಲವರು ಮಹಿಳಾ ಕೋಟಾದಡಿ ಸಚಿವ ಸ್ಥಾನಕ್ಕಾಗಿ ಪೈಪೋಟಿ ನಡೆಸುತ್ತಿದ್ದಾರೆ.



ಈ ನಡುವೆ ವಿಜಯನಗರದ ಶಾಸಕ ಎಂ.ಕೃಷ್ಣಪ್ಪ, ಗೋವಿಂದರಾಜನಗರ ಕ್ಷೇತ್ರದ ಶಾಸಕ ಪ್ರಿಯಕೃಷ್ಣ, ಶಿರಾ ಕ್ಷೇತ್ರದ ಶಾಸಕ ಟಿ.ಬಿ.ಜಯಚಂದ್ರ ಸೇರಿದಂತೆ ಹಲವರು ಸಚಿವ ಸ್ಥಾನಕ್ಕಾಗಿ ಬಿಗಿಪಟ್ಟು ಹಿಡಿದಿದ್ದಾರೆ. ಈ ಬಾರಿ ಸಂಪುಟದಲ್ಲಿ ಸ್ಥಾನ ಸಿಗದಿದ್ದರೆ, ಮುಂದಿನ ಚುನಾವಣೆಯಲ್ಲಿ ತಮ್ಮದೇ ದಾರಿ ನೋಡಿಕೊಳ್ಳುವುದಾಗಿ ಕೆಲವರು ಎಚ್ಚರಿಕೆ ನೀಡಿದ್ದಾರೆ ಎನ್ನಲಾಗಿದೆ. ಅಸಮಾಧಾನಿತರನ್ನು ಸಮಾಧಾನಪಡಿಸಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಾನಾ ರೀತಿಯ ಕಸರತ್ತು ನಡೆಸಿದ್ದಾರೆ. ಟಿ.ಬಿ. ಜಯಚಂದ್ರ ಅವರು ದೆಹಲಿ ವಿಶೇಷ ಪ್ರತಿನಿಧಿ ಸ್ಥಾನದಿಂದ ತೃಪ್ತರಾಗಿಲ್ಲ ಎನ್ನಲಾಗಿದ್ದು, ಮುಂದಿನ ಚುನಾವಣೆಯಲ್ಲಿ ತಾವು ಸ್ಪರ್ಧಿಸುವ ಸಾಧ್ಯತೆ ಕಡಿಮೆ ಇರುವ ಹಿನ್ನೆಲೆಯಲ್ಲಿ ಪ್ರಸಕ್ತ ಅವಧಿಯಲ್ಲೇ ಸಚಿವ ಸ್ಥಾನ ನೀಡಬೇಕೆಂದು ಬಿಗಿಪಟ್ಟು ಹಿಡಿದಿದ್ದಾರೆ ಎನ್ನಲಾಗಿದೆ. ಇದಕ್ಕೆ ಪರ್ಯಾಯವಾಗಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಅವರ ಪುತ್ರನಿಗೆ ಬಿ-ಫಾರಂ ನೀಡುವುದರ ಜೊತೆಗೆ ಪ್ರಸಕ್ತ ಅವಧಿಯಲ್ಲಿ ನಿಗಮ-ಮಂಡಳಿ ಸೇರಿದಂತೆ ಸೂಕ್ತ ಹುದ್ದೆ ನೀಡುವ ಪ್ರಸ್ತಾಪ ಮಾಡಲಾಗಿದೆ ಎಂದು ತಿಳಿದುಬಂದಿದೆ.

ಆದರೆ ಎಂ.ಕೃಷ್ಣಪ್ಪ ಅವರು ಯಾವುದೇ ಕಾರಣಕ್ಕೂ ಸಚಿವ ಸ್ಥಾನವನ್ನು ಹೊರತುಪಡಿಸಿ ಬೇರೆ ಆಯ್ಕೆ ಬೇಡ ಎಂಬ ನಿಲುವು ತಳೆದಿದ್ದಾರೆ ಎನ್ನಲಾಗಿದೆ. ಪ್ರಿಯಕೃಷ್ಣ ಅವರಿಗೆ ನಿಗಮ-ಮಂಡಳಿಯಲ್ಲಿ ಅವಕಾಶ ನೀಡುವ ಪ್ರಸ್ತಾಪವನ್ನೂ ಎಂ.ಕೃಷ್ಣಪ್ಪ ತಳ್ಳಿ ಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿನಲ್ಲಿ ಕಾಂಗ್ರೆಸ್‌ಗೆ ಎಂ.ಕೃಷ್ಣಪ್ಪ ಮತ್ತು ಪ್ರಿಯಕೃಷ್ಣ ಅವರ ಬೆಂಬಲ ಆನೆಬಲದಂತಿದೆ. ಅವರು ವ್ಯತಿರಿಕ್ತ ನಿರ್ಧಾರ ತೆಗೆದುಕೊಂಡರೆ ಕಾಂಗ್ರೆಸ್‌ಗೆ ಭಾರಿ ಪ್ರಮಾಣದ ನಷ್ಟವಾಗಲಿದೆ ಎಂಬ ಆತಂಕ ರಾಜ್ಯ ನಾಯಕರಲ್ಲಿದೆ. ಇದರೊಂದಿಗೆ ಇನ್ನೂ ಕೆಲವು ಹಿರಿಯ ಶಾಸಕರು ಸಚಿವ ಸ್ಥಾನಕ್ಕಾಗಿ ಪಟ್ಟು ಹಿಡಿದಿದ್ದಾರೆ. ಮೂಲಗಳ ಪ್ರಕಾರ, ಈಗ ರಚನೆಯಾಗಿರುವ 33 ಮಂದಿಯ ಸಂಪುಟದಲ್ಲಿ ಯಾವುದೇ ಬದಲಾವಣೆ ಮಾಡದಂತೆ ಹೈಕಮಾಂಡ್ ಈಗಾಗಲೇ ಖಡಕ್ ಸಂದೇಶ ರವಾನಿಸಿದೆ. ಆದರೆ ಸದ್ಯದ ರಾಜಕೀಯ ಪರಿಸ್ಥಿತಿಯ ಒತ್ತಡಕ್ಕೆ ಮಣಿದು ಕೆಲವು ಬದಲಾವಣೆಗಳನ್ನು ಮಾಡುವುದು ಸೂಕ್ತ ಎಂದು ಹೈಕಮಾಂಡ್ ಮನವೊಲಿಸಲು ರಾಜ್ಯ ನಾಯಕರು ಪ್ರಯತ್ನಿಸುತ್ತಿದ್ದಾರೆ ಎನ್ನಲಾಗಿದೆ. ಸಂಪುಟದಲ್ಲಿರುವ ಕೆಲವು ತಟಸ್ಥ ಹಾಗೂ ಹಿರಿಯ ಸಚಿವರನ್ನು ಕೈಬಿಟ್ಟು ಜನಪ್ರಿಯ ನಾಯಕರಿಗೆ ಮಣೆ ಹಾಕಬೇಕು ಎಂಬುದು ರಾಜ್ಯ ನಾಯಕರ ಒತ್ತಾಯವಾಗಿದೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಚರ್ಚೆ ನಡೆಸಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಯತ್ತ ಮುಖ ಮಾಡಿದ್ದಾರೆ.

ವಿಧಾನಸಭಾ ಅಧಿವೇಶನ ಮುಕ್ತಾಯಗೊಂಡ ಬೆನ್ನಲ್ಲೇ ಮುಖ್ಯಮಂತ್ರಿಯವರ ದೆಹಲಿ ಪ್ರವಾಸ ಕುತೂಹಲ ಕೆರಳಿಸಿದ್ದು, ಸಂಪುಟ ಪುನಾರಚನೆ ನಡೆಯಲಿದೆಯೇ ಎಂಬ ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆ.

# ಕಡಿಮೆ ದರದಲ್ಲಿ ಎಥೆನಾಲ್ ಉತ್ಪಾದಕರಿಗೆ ಅಕ್ಕಿ ಮಾರಾಟ : ಪ್ರಿಯಾಂಕ ಖರ್ಗೆ ಆಕ್ಷೇಪ

ಬೆಂಗಳೂರು: ತೆರಿಗೆದಾರರ ಹಣದಲ್ಲಿ ಖರೀದಿಸಿದ ಅಕ್ಕಿಯನ್ನು ಎಥೆನಾಲ್ ಉತ್ಪಾದಕರಿಗೆ ಶೇ.40ರಷ್ಟು ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿರುವುದೇಕೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ. ತಮ್ಮ ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪ್ರತಿಕ್ರಿಯಿಸಿರುವ ಅವರು, ಕೇಂದ್ರ ಸರ್ಕಾರದ ಎಥೆನಾಲ್ ನೀತಿಯ ಬಗ್ಗೆ ಹಲವು ಪ್ರಶ್ನೆಗಳನ್ನು ಮುಂದಿಟ್ಟಿದ್ದಾರೆ.

ಆಹಾರ ಭದ್ರತೆಗಾಗಿ ತೆರಿಗೆದಾರರ ಹಣದಲ್ಲಿ ರೈತರಿಂದ ಭತ್ತ ಖರೀದಿಸಿ, ಅದನ್ನು ಸಂಗ್ರಹಿಸಿ, ಸಾಗಣೆ ವೆಚ್ಚ ಭರಿಸಿದ ಬಳಿಕ ಭಾರತೀಯ ಆಹಾರ ನಿಗಮ (ಎಫ್‌ಸಿಐ) ಮೂಲಕ ಎಥೆನಾಲ್ ಉತ್ಪಾದಕರಿಗೆ ಅದರ ಸ್ವಾಧೀನ ವೆಚ್ಚಕ್ಕಿಂತ ಸುಮಾರು ಶೇ.40ರಷ್ಟು ಕಡಿಮೆ ದರದಲ್ಲಿ ಅಕ್ಕಿಯನ್ನು ಮಾರಾಟ ಮಾಡುತ್ತಿರುವ ಕೇಂದ್ರ ಸರ್ಕಾರದ ನೀತಿ ಸರಿಯಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಭಾರತದ ಎಥೆನಾಲ್ ಗಣಿತವೇ ಸರಿಯಾಗಿ ಹೊಂದಿಕೆಯಾಗುತ್ತಿಲ್ಲ. ಆಹಾರ ಭದ್ರತೆಗಾಗಿ ಸರ್ಕಾರ ರೈತರಿಂದ ಭತ್ತವನ್ನು ಖರೀದಿಸುತ್ತದೆ. ಇದಕ್ಕಾಗಿ ತೆರಿಗೆದಾರರ ಹಣ ಬಳಸಲಾಗುತ್ತದೆ. ಬಳಿಕ ಖರೀದಿಸಿದ ಧಾನ್ಯವನ್ನು ಸಂಗ್ರಹಿಸುವುದು, ಸಾಗಣೆ ಮಾಡುವುದು ಸೇರಿದಂತೆ ಸರ್ಕಾರದ ಮೇಲೆ ಮತ್ತಷ್ಟು ವೆಚ್ಚದ ಹೊರೆ ಬೀಳುತ್ತದೆ. ಇಷ್ಟೆಲ್ಲ ವೆಚ್ಚ ಮಾಡಿದ ಬಳಿಕ ಅದೇ ಅಕ್ಕಿಯನ್ನು ಎಥೆನಾಲ್ ಉತ್ಪಾದಕರಿಗೆ ಸ್ವಾಧೀನ ವೆಚ್ಚಕ್ಕಿಂತ ಸುಮಾರು ಶೇ.40ರಷ್ಟು ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿರುವುದು ಯಾವ ರೀತಿಯ ಆರ್ಥಿಕ ನೀತಿ ಎಂದು ಅವರು ಪ್ರಶ್ನಿಸಿದ್ದಾರೆ. ಈ ಸಂಪೂರ್ಣ ವ್ಯವಸ್ಥೆಯಿಂದ ನಿಜವಾಗಿ ಲಾಭ ಪಡೆಯುತ್ತಿರುವವರು ಯಾರು? ಎಂದು ಪ್ರಶ್ನಿಸಿರುವ ಸಚಿವರು, ತುರ್ತಾಗಿ ಸೃಷ್ಟಿಸಲಾದ ಎಥೆನಾಲ್ ಉತ್ಪಾದನಾ ಸಾಮರ್ಥ್ಯಕ್ಕೆ ಅಗತ್ಯವಾದ ಕಚ್ಚಾ ವಸ್ತು ಒದಗಿಸುವ ಉದ್ದೇಶದಿಂದ ಆಹಾರ ಧಾನ್ಯವನ್ನು ದೊಡ್ಡ ಪ್ರಮಾಣದಲ್ಲಿ ಎಥೆನಾಲ್ ಉತ್ಪಾದನೆಗೆ ಒದಗಿಸಲಾಗುತ್ತಿದೆಯೇ ಎಂದು ಕೇಳಿದ್ದಾರೆ.

ಇನ್ನೊಂದೆಡೆ, ಸರ್ಕಾರವೇ ಉತ್ಪಾದಕರಿಂದ ಹೆಚ್ಚಿನ ಬೆಲೆಗೆ ಎಥೆನಾಲ್ ಖರೀದಿಸಿ, ಅದನ್ನು ಪೆಟ್ರೋಲ್‌ನಲ್ಲಿ ಮಿಶ್ರಣ ಮಾಡುತ್ತಿದೆ. ಹೀಗಿರುವಾಗ ಧಾನ್ಯವನ್ನು ಕಡಿಮೆ ದರದಲ್ಲಿ ನೀಡಿ, ಬಳಿಕ ಅದೇ ಉದ್ಯಮದಿಂದ ಹೆಚ್ಚಿನ ಬೆಲೆಗೆ ಎಥೆನಾಲ್ ಖರೀದಿಸುವುದರಿಂದ ಅಂತಿಮವಾಗಿ ಸಾಮಾನ್ಯ ಗ್ರಾಹಕನಿಗೆ ಆಗುವ



ಲಾಭವೇನು? ಎಂದು ಅವರು ಕಿಡಿಕಾರಿದ್ದಾರೆ. ಎಥೆನಾಲ್ ಮಿಶ್ರಣದ ಪರಿಣಾಮವಾಗಿ ಪೆಟ್ರೋಲ್ ಬೆಲೆ ಸಾಮಾನ್ಯ ಜನರಿಗೆ ಕಡಿಮೆಯಾಗಿದೆಯೇ? ವಾಹನಗಳ ಮೈಲೇಜ್ ಮತ್ತು ನಿರ್ವಹಣಾ ವೆಚ್ಚದ ಮೇಲೆ ಉಂಟಾಗುವ ಪರಿಣಾಮವನ್ನು ಯಾರು ಪರಿಗಣಿಸುತ್ತಿದ್ದಾರೆ? ಎಂದು ಅವರು ಪ್ರಶ್ನಿಸಿದ್ದಾರೆ. ಯಾರನ್ನು ಯಾರು ಸಬ್ಸಿಡಿ ಮಾಡುತ್ತಿದ್ದಾರೆ? ಈ ವ್ಯವಸ್ಥೆಯಲ್ಲಿ ನಿಜವಾದ ಲಾಭ ಯಾರಿಗೆ? ಎಂಬುದಕ್ಕೆ ಕೇಂದ್ರ ಸರ್ಕಾರ ಸ್ಪಷ್ಟವಾಗಿ ಉತ್ತರಿಸಬೇಕಾಗಿದೆ ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.ಆಹಾರ ಭದ್ರತೆಗಾಗಿ ಮೀಸಲಿಟ್ಟಿರುವ ಧಾನ್ಯವನ್ನು ಎಥೆನಾಲ್ ಉತ್ಪಾದನೆಗೆ ಬಳಸುವ ನೀತಿಯ ಆರ್ಥಿಕ, ಸಾಮಾಜಿಕ ಹಾಗೂ ಸಾರ್ವಜನಿಕ ಹಿತಾಸಕ್ತಿಯ ಪರಿಣಾಮಗಳ ಕುರಿತು ಕೇಂದ್ರ ಸರ್ಕಾರ ಪಾರದರ್ಶಕವಾಗಿ ಲೆಕ್ಕ ನೀಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

# ರಾಜ್ಯಪಾಲರ ನಿರ್ಧಾರದ ಮೇಲೆ ನಾಗೇಂದ್ರ ಭವಿಷ್ಯ ನಿರ್ಧಾರ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬಹುಕೋಟಿ ಹಣ ವರ್ಗಾವಣೆ ಹಗರಣಕ್ಕೆ ಸಂಬಂಧಿಸಿದಂತೆ, ಸಚಿವ ಬಿ.ನಾಗೇಂದ್ರ ವಿರುದ್ಧ ಕಾನೂನು ಕ್ರಮ ಜರುಗಿಸಲು (ಪ್ರಾಸಿಕ್ಯೂಷನ್) ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು, ಸಚಿವ ಸಂಪುಟ ಸಭೆಯ ಅಭಿಪ್ರಾಯ ಕೇಳಲು ಮುಂದಾಗಿರುವುದು ಕುತೂಹಲ ಮೂಡಿಸಿದೆ. ಒಂದು ವೇಳೆ ಸಚಿವ ಸಂಪುಟ ಸಭೆಯು ರಾಜ್ಯಪಾಲರ ಪತ್ರಕ್ಕೆ ಮನ್ನಣೆ ಕೊಡದಿದ್ದರೆ, ರಾಜ್ಯಪಾಲರು ಮುಂದೆ ತೆಗೆದುಕೊಳ್ಳುವ ನಿರ್ಧಾರ ಸಚಿವ ನಾಗೇಂದ್ರ ರಾಜಕೀಯ ಭವಿಷ್ಯವನ್ನು ತೀರ್ಮಾನ ಮಾಡಲಿದೆ.

ಜನಪ್ರತಿನಿಧಿಗಳ ವಿರುದ್ಧ ವಿಚಾರಣೆ ನಡೆಸಲು ಸಚಿವ ಸಂಪುಟ ಒಪ್ಪಿಗೆ ಕಡ್ಡಾಯ ಎಂಬುದು ಕೇವಲ ಔಪಚಾರಿಕ ಪ್ರಕ್ರಿಯೆ ಎಂದು ಹೇಳಲಾಗುತ್ತದೆ. ಏಕೆಂದರೆ, ಈ ಹಿಂದೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ವಿರುದ್ಧ ಡಿ ನೋಟಿಫಿಕೇಷನ್ ಪ್ರಕರಣದಲ್ಲಿ ಲೋಕಾಯುಕ್ತ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಲು ಅನುಮತಿ ನೀಡಬೇಕೆಂದು ಅಂದಿನ ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಅವರಿಗೆ ಪತ್ರ ಬರೆದಿದ್ದರು. ಈ ಸಂದರ್ಭದಲ್ಲಿ ಸಚಿವ ಸಂಪುಟ ಸಭೆಯು ಯಡಿಯೂರಪ್ಪ ವಿರುದ್ಧ ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಬಾರದು ಎಂದು ಒಂದು ಸಾಲಿನ ನಿರ್ಣಯವನ್ನು ತೆಗೆದುಕೊಂಡಿತ್ತು.ಆದರೆ ರಾಜ್ಯಪಾಲರು ಸಚಿವ ಸಂಪುಟ ಸಭೆಯನಿರ್ಣಯವನ್ನು ತಿರಸ್ಕರಿಸಿದ್ದರು ಎಂಬುದು ಉಲ್ಲೇಖ.ರಾಜ್ಯಪಾಲರ ಕಚೇರಿಯು ಈ ವಿಷಯದಲ್ಲಿ ಕಾನೂನು ಇಲಾಖೆಯ



ಅಭಿಪ್ರಾಯ ಪಡೆಯುವ ಪ್ರಕ್ರಿಯೆಗೆ ಮುಂದಾಗಿದೆ. ರಾಜ್ಯಪಾಲರು ಸಚಿವರ ವಿರುದ್ಧದ ಪ್ರಾಸಿಕ್ಯೂಷನ್ ಅನುಮತಿ ವಿಚಾರದಲ್ಲಿ ಸರ್ಕಾರದ ನೆರವು ಮತ್ತು ಸಲಹೆಯನ್ನು ಪಡೆಯಬೇಕೇ ಎಂಬ ಪ್ರಶ್ನೆಯೂ ಇದರೊಂದಿಗೆ ಮುನ್ನೆಲೆಗೆ ಬಂದಿದೆ. ವಾಲ್ಮೀಕಿ ನಿಗಮದ ನಿಧಿಯ ದುರುಪಯೋಗ ಮತ್ತು ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ತನಿಖಾ ದಳ (ಸಿಬಿಐ) ಸಚಿವ ನಾಗೇಂದ್ರ ಅವರ ವಿರುದ್ಧ ಪ್ರಾಸಿಕ್ಯೂಷನ್ ಅನುಮತಿ ಕೋರಿ ರಾಜ್ಯಪಾಲರಿಗೆ ಅಧಿಕೃತ ಪತ್ರ ಬರೆದಿದೆ. ರಾಜ್ಯಪಾಲರ ಕಚೇರಿಯು (ಲೋಕಭವನ) ಈ ಕುರಿತು ಕಾನೂನು ಇಲಾಖೆ ಹಾಗೂ ತಜ್ಞರ ಸಲಹೆಯನ್ನು ಪಡೆದುಕೊಂಡಿದ್ದು, ಸಚಿವ ಸಂಪುಟದ ಅಭಿಪ್ರಾಯ ಮತ್ತು ಸಂವಿಧಾನಿಕ ನಿಯಮಗಳ ಅಡಿಯಲ್ಲಿ ಮುಂದಿನ ನಿರ್ಧಾರ ಕೈಗೊಳ್ಳಲು ಸಿದ್ಧತೆ ನಡೆಸಿದೆ. ಸಿಬಿಐ ರಾಜ್ಯ ಸರ್ಕಾರಕ್ಕೆ ಮೊದಲು ಮಾಹಿತಿ ಅಥವಾ ಪತ್ರ ನೀಡಬೇಕಾಗಿತ್ತು ಎಂಬುದು ಸರ್ಕಾರದ ವಾದವಾಗಿದೆ.

ಇದೇ ವಿಚಾರ ಈಗ ಕಾನೂನು ಮತ್ತು ಸಂವಿಧಾನಾತಕ ಚರ್ಚೆಯನ್ನೂ ಹುಟ್ಟುಹಾಕಿದೆ. ವಿಶೇಷವಾಗಿ, ರಾಜ್ಯ ವ್ಯಾಪ್ತಿಯಲ್ಲಿ ಸಿಬಿಐ ತನಿಖೆ ನಡೆಸುವ ಅಧಿಕಾರ, ರಾಜ್ಯದ ಒಪ್ಪಿಗೆ, ಹಾಗೂ ಹಾಲಿ ಸಚಿವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವ ಸಂದರ್ಭದಲ್ಲಿ ರಾಜ್ಯಪಾಲರ ಅಧಿಕಾರದ ಮಿತಿಗಳೇನು ಎಂಬುದು ಪ್ರಮುಖ ಪ್ರಶ್ನೆಗಳಾಗಿವೆ.

**ಹಿನ್ನೆಲೆ ಮತ್ತು ಕಾನೂನು ಚೌಕಟ್ಟು:**

2024ರ ಲೋಕಸಭಾ ಚುನಾವಣೆಗೆ ಮುನ್ನ ವಾಲ್ಮೀಕಿ ನಿಗಮದಲ್ಲಿ ನಡೆದ ಹಣ-ಕಾಸು ಅಕ್ರಮಗಳು ಮತ್ತು ವರ್ಗಾವಣೆ ಪ್ರಕರಣಗಳು ಬೆಳಕಿಗೆ ಬಂದಾಗ ಬಿ. ನಾಗೇಂದ್ರ ಅವರು ಎಸ್‌ಟಿ ಕಲ್ಯಾಣ ಸಚಿವರಾಗಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಕ್ರಿಮಿನಲ್ ಪಿತೂರಿ ಆರೋಪದ ಮೇರೆಗೆ ಹಾಗೂ ಇಡಿ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಕಾನೂನು ಕ್ರಮಕ್ಕೆ ಅನುಮತಿ ಕೋರಿ ಪ್ರತ್ಯೇಕ ಮನವಿಗಳನ್ನು ಲೋಕಭವನಕ್ಕೆ ಸಲ್ಲಿಸಿವೆ. ಈ ಕುರಿತು ಪ್ರತಿಕ್ರಿಯಿಸಿದ್ದ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಸಚಿವರೊಬ್ಬರ ವಿರುದ್ಧ ಕಾನೂನು ಕ್ರಮ ಜರುಗಿಸಲು ರಾಜ್ಯಪಾಲರು ನೇರವಾಗಿ ಅನುಮತಿ ನೀಡಬಹುದೇ ಎಂಬ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದು, ಇದಕ್ಕೆ ರಾಜ್ಯ ಸರ್ಕಾರದ ಒಪ್ಪಿಗೆ ಕಡ್ಡಾಯವಾಗಿ ಅಗತ್ಯವಿರುತ್ತದೆ ಎಂದು ಪ್ರತಿಪಾದಿಸಿದ್ದರು. ಭಾರತೀಯ ಕಾನೂನು ಚೌಕಟ್ಟಿನನ್ವಯ, ದೆಹಲಿ ವಿಶೇಷ ಪೊಲೀಸ್ ಸ್ಥಾಪನಾ ಕಾಯಿದೆ, 1946ರ ಸೆಕ್ಷನ್ 6ರ ಪ್ರಕಾರ ಸಿಬಿಐ ತನ್ನ ತನಿಖಾ ವ್ಯಾಪ್ತಿಯನ್ನು ಚಲಾಯಿಸಲು ಸಾಮಾನ್ಯವಾಗಿ ರಾಜ್ಯ ಸರ್ಕಾರದ ಒಪ್ಪಿಗೆಯನ್ನು ಅಪೇಕ್ಷಿಸುತ್ತದೆ. ಆದಾಗ್ಯೂ ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯಗಳು ಸ್ವಯಂಪ್ರೇರಿತವಾಗಿ ಅಥವಾ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ಮೇರೆಗೆ ಸಿಬಿಐ ತನಿಖೆಗೆ ಆದೇಶಿಸಿದ ಸಂದರ್ಭಗಳಲ್ಲಿ ಅಥವಾ ಕೇಂದ್ರ ಸರ್ಕಾರದ ನೌಕರರು ಭಾಗಿಯಾದಾಗ ಇಂತಹ ವಿಶೇಷ ಒಪ್ಪಿಗೆಯ ಅಗತ್ಯವಿರುವುದಿಲ್ಲ ಎಂದು ಕಾನೂನು ತಜ್ಞರು ಅಭಿಪ್ರಾಯಪಡುತ್ತಾರೆ.

ಸಚಿವರು ಮತ್ತು ಶಾಸಕರ ವಿರುದ್ಧದ ಪ್ರಾಸಿಕ್ಯೂಷನ್ ಮಂಜೂರಾತಿ ವಿಷಯಗಳಲ್ಲಿ ರಾಜ್ಯಪಾಲರು ಏಕಪಕ್ಷೀಯವಾಗಿ ನಿರ್ಧಾರ ಕೈಗೊಳ್ಳಲು ಸಾಧ್ಯವಿದೆಯೇ ಅಥ-ವಾ ಸರ್ಕಾರದ ಒಪ್ಪಿಗೆ ಕಡ್ಡೇಪಾಯವೇ ಎಂಬ ಬಗ್ಗೆ ಲೋಕಭವನವು ಕಾನೂನು ತಜ್ಞರಿಂದ ಸ್ಪಷ್ಟನೆ ಹಾಗೂ ಸಲಹೆಯನ್ನು ಪಡೆದುಕೊಂಡಿದೆ. ಬಂದಿರುವ ಕಾನೂನು ಅಭಿಪ್ರಾಯದ ಮೇರೆಗೆ, ಈ ಪ್ರಕ್ರಿಯೆಯಲ್ಲಿ ರಾಜ್ಯ ಸರ್ಕಾರದ ಅಧಿಕೃತ ಅಭಿಪ್ರಾಯವನ್ನು ಪಡೆದು ಮುಂದಿನ ಕ್ರಮ ಜರುಗಿಸಲು ನಿರ್ಧರಿಸಲಾಗಿದೆ.

E NAMMA DHURTHI NEWS
KANNADA DAILY NEWS PAPER

ಈ ನಮ್ಮ ಧೃತಿ ನ್ಯೂಸ್

ಗುರುವಾರ 27-08-2026



# ಆಘಾತ ಬಂಧ ಎಂಬ ಮಾನಸಿಕತೆ

ಆ ಕುಟುಂಬದಲ್ಲಿ ಅಡುಗೆ ಮನೆಯಿಂದ ಹಿಡಿದು ಅಂಗಳದವರೆಗೆ ನಡೆಯುವ ಎಲ್ಲಾ ಆಗು ಹೋಗುಗಳ ಜವಾಬ್ದಾರಿ ಆಕೆಯದ್ದು. ಮುಂಜಾನೆ, ಎಲ್ಲರಿಗಿಂತ ಬೇಗನೆ ಎದ್ದು ಅಡುಗೆ ಮನೆಯ ಗ್ಯಾಸ್ ಕಟ್ಟೆಯನ್ನು ಒರೆಸಿ ಕಸಗುಡಿಸಿ ಚಹಾಕ್ಕೆ ಎಸರಿಟ್ಟು ಇಡೀ ಮನೆಯ ಕಸಗುಡಿಸುವುದು ಆಕೆಯೇ. ಅಂಗಳದ ಕಸ ಹೊಡೆದು ಹೊಸಲಿಗೆ ನೀರು ಹಾಕಿ ತೊಳೆದು ಅಂಗಳಕ್ಕೆ ತಳಿ ಹೊಡೆದು ಚಂದದ ರಂಗವಲ್ಲಿ ಬಿಡಿಸುವ ಕೆಲಸ ಕೂಡ ಆಕೆಯದ್ದೇ.

ಒಬ್ಬೊಬ್ಬರನ್ನಾಗಿ ಮನೆಯ ಸರ್ವ ಸದಸ್ಯರನ್ನು ಎಬ್ಬಿಸಿ ಅವರೆಲ್ಲರಿಗೂ ಬಿಸಿಯಾದ ಚಹಾವನ್ನು ನೀಡುವ ಆಕೆ ಮಾತ್ರ ಕುಡಿಯುವುದು ತುಸು ಅರಿ ಹೋದ ಚಹಾವನ್ನು. ಬಿಸಿಯಾದ ಚಹಾ ಕುಡಿಯಲು ಆಕೆಗೂ ಇಷ್ಟವೇ.... ಆದರೆ ಏನು ಮಾಡುವುದು ಕೆಲಸದ ಒತ್ತಡದಲ್ಲಿ ಆಕೆಯ ಚಹಾ ಪ್ರತಿದಿನ ಅರಿಯೇ ಹೋಗುತ್ತದೆ. ನಂತರ ತಿಂಡಿಂ-ಮ ತಯಾರಿಯಲ್ಲಿ ತೊಡಗುವ ಆಕೆ ಅದಕ್ಕೆ ಬೇಕಾದ ಎಲ್ಲಾ ಪರಿಕರಗಳನ್ನು ಸಿದ್ಧಪಡಿಸಿ ಒಗ್ಗರಣೆ ಹಾಕಿ ಮತ್ತೊಂದು ಬಾರಿ ಎಲ್ಲರಿಗೂ ಬಿಸಿ ಚಹಾ ಕೊಟ್ಟರೂ ಆಕೆಯ ಪಾಲಿಗೆ ದೊರೆಯುವುದು ಮತ್ತೆ ಆರಿದ ಚಹಾ.

ನಂತರ ಮಕ್ಕಳಿಗೆ ಸ್ನಾನ ಮಾಡಿಸಿ ಬಟ್ಟೆ ತೊಡಿಸಿ ಅವರ ಡಬ್ಬಿಗೆ ತಿಂಡಿ ಹಾಕಿಕೊಟ್ಟು ಕುಡಿಯಲು ಹಾಲು ಕೊಟ್ಟು ತಿಂಡಿ ತಿನ್ನಿಸಿ ಶಾಲೆಯ ವ್ಯಾನ್ ನಲ್ಲಿ ಅವರನ್ನು ಕಳಿಸಿ ಬರುವವರೆಗೂ ಆಕೆ ಪಾದರಸದಂತೆ ಮನೆಯ ತುಂಬಾ ಓಡಾಡುತ್ತಾ ಎಲ್ಲ ಕೆಲಸಗಳನ್ನು ಪೂರೈಸುತ್ತಾಳೆ. ನಂತರ ಮನೆಗೆ ಬಂದು ಗಂಡನ ಅವಶ್ಯಕತೆಗಳನ್ನು ಪೂರೈಸಿ ಮನೆಯ ಹಿರಿಯರ ತಿಂಡಿ ತೀರ್ಥದ ವ್ಯವಸ್ಥೆ ಮಾಡಿ ತಾನು ಸ್ನಾನ ಮಾಡಿ ಪೂಜೆ ಮಾಡಿ ತಿಂಡಿ ತಿನ್ನುವ ಹೊತ್ತಿಗೆ ಮಧ್ಯಾಹ್ನದ 12 ಗಂಟೆಯಾಗಿರುತ್ತದೆ. ಲಗುಬಗೆಯಿಂದ ತಿಂಡಿ ತಿಂದ ಆಕೆ ಮನೆಗೆ ಬೇಕಾದ ತರಕಾರಿ ದಿನಸಿ ಸಾಮಾನುಗಳನ್ನು ಖರೀದಿಸಿ ತಂದು ಮಧ್ಯಾಹ್ನದ ಅಡುಗೆಗೆ ತೊಡಗಿಕೊಳ್ಳುತ್ತಾಳೆ. ಮತ್ತೆ ಯಥಾಪ್ರಕಾರ ತರಕಾರಿ ಹೆಚ್ಚಿಟ್ಟುಕೊಂಡು ಎಲ್ಲವನ್ನು ಮಾಡಿ ಅತ್ತೆ ಮಾವನಿಗೆ ಊಟ ಬಡಿಸಿ ತಾನೊಂದಷ್ಟು ಉಂಡ ಶಾಸ್ತ್ರ ಮಾಡಿ ಎಲ್ಲ ಪದಾರ್ಥಗಳನ್ನು ಮತ್ತೆ ಯಥಾ ಸ್ಥಾನದಲ್ಲಿ ಎತ್ತಿಟ್ಟರೆ ಎರಡನೇ ಹಂತದ ಕೆಲಸ ಮುಗಿದಂತೆ.

ದಣಿದ ದೇಹಕ್ಕೆ ಕೊಂಚ ವಿಶ್ರಾಂತಿ ದೊರಕಿಸಿಕೊಡಲು ಆಕೆ ನಿಧಾನವಾಗಿ ಕಾಲೆಳೆಯುತ್ತಾ ತನ್ನ ಕೋಣೆಗೆ ಹೋಗಿ ಒಂದರ್ಧ ಗಂಟೆ ಮಲಗಿದರೆ



ಅದೇ ಹೆಚ್ಚು.

ಮತ್ತೆ ನಾಲ್ಕು ಗಂಟೆ ಹೊತ್ತಿಗೆ ಮಕ್ಕಳು ಶಾಲೆಯಿಂದ, ಪತಿ ತನ್ನ ಕೆಲಸದಿಂದ ಮನೆಗೆ ಮರಳಿದರೆ ಅವರ ತಿಂಡಿ ಹಾಲು ಅತ್ತೆ ಮಾವ ಮತ್ತಿತರ ಮನೆಯ ಸದಸ್ಯರಿಗೆ ಚಹಾ ತಿಂಡಿಯ ಸರಬರಾಜು ಹೀಗೆ ನಿರಂತರ ಕೆಲಸ ಜಾರಿಯಲ್ಲಿರುತ್ತದೆ.

ನಂತರ ಮನೆಯ ಕಸಗುಡಿಸಿ ತಾನು ಕೂಡ ತಲೆ ಬಾಚಿಕೊಂಡು ಮುಖ ತೊಳೆದು ದೇವರ ಮುಂದಿನ ದೀಪ ಹಚ್ಚಿ ಕೈಮುಗಿದು ಮಕ್ಕಳ ಹೋಂವರ್ಕ್ ಮಾಡಿಸುವ ಕೆಲಸ. ಒಂದೊಮ್ಮೆ ಹೋಂವರ್ಕ್ ಮುಗಿದರೆ ರಾತ್ರಿಯ ಅಡುಗೆಗೆ ತಯಾರಿ. ಎಲ್ಲರೂ ಊಟ ಮುಗಿಸಿ ತಮ್ಮ ಕೋಣೆ ಸೇರಿದರೆ ಅಡುಗೆ ಮನೆ ಸ್ವಚ್ಛಗೊಳಿಸಿ ನಾಳೆಯ ತಿಂಡಿಗೆ ಅವಶ್ಯಕವಾದ ಹಿಟ್ಟನ್ನು ರುಬ್ಬಿ, ಹಾಲಿಗೆ ಹೆಪ್ಪು ಹಾಕಿ ಉಳಿದ ಹಾಲನ್ನು ಫ್ರಿಜ್ ಸೇರಿಸಿದರೆ ಒಂದು ಹಂತದ ಕೆಲಸ ಮುಗಿಯಿತು ಎಂದರ್ಥ. ಮತ್ತೆ ಎಲ್ಲರ ಕೋಣೆಗಳಿಗೆ ನೀರಿನ ಬಾಟಲ್ ಇಟ್ಟು ಮನೆಯ ತಲೆ ಬಾಗಿಲಿನಿಂದ ಹಿತ್ತಲವರೆಗೆ ಎಲ್ಲವನ್ನು ಮತ್ತೊಮ್ಮೆ ಪರೀಕ್ಷಿಸಿ ನೋಡಿ ತನ್ನ ಕೋಣೆಗೆ ಬಂದು ಅಲ್ಲಿಗೆವರೆಗೂ ಧರಿಸಿದ ಉಡುಪನ್ನು ಬದಲಿಸಿ ರಾತ್ರಿ ಉಡುಗೆಯನ್ನು ತೊಟ್ಟು ಮಲಗಿದರೆ ದಣಿದ ದೇಹಕ್ಕೆ ಪುರುಸೊತ್ತಿಲ್ಲವೇ ನಿದ್ರಾ ದೇವಿ ಹೊಕ್ಕು ಬಿಡುವಳು. ಇಷ್ಟೆಲ್ಲಾ ಆದರೂ ಕೂಡ ಮನೆಯ ಹೆಣ್ಣು ಮಕ್ಕಳನ್ನು ದಿನವಿಡೀ ಮನೆಯಲ್ಲಿ ಇರುತ್ತೀಯ ಏನು ಮಾಡುತ್ತಿ ಎಂದು ಮನೆಯ ಹಿರಿಯರು ಗಂಡ ಮಕ್ಕಳು ಆಕೆಯ ಮನ ನೋಯಿಸುತ್ತಾರೆ.

ಇದು ಕೇವಲ ಒಂದು ಮನೆಯ ಕಥೆಯಲ್ಲ.... ಕೊಂಚ ವಿಭಿನ್ನ ರೀತಿಯಲ್ಲಿ, ಆದ-'ರೆ ಇದೇ ಹಿನ್ನೆಲೆಯ ಬಹುತೇಕ ಎಲ್ಲ ಮನೆ ಮನೆಗಳ ಕತೆ ಇದೇ ಆಗಿರುತ್ತದೆ... ಅಲ್ವೇ ಸ್ನೇಹಿತರೆ ಆದರೆ ಇಲ್ಲಿ ನಾನು ಹೇಳುತ್ತಿರುವುದು ಎಂಥ ವಿಭಿನ್ನವಾದ ಮಾನಸಿಕವಾಗಿ ಬಳಲಿಸುವ ಈ ಕೌಟುಂಬಿಕವಾದ ಬಂಧನದ ವಿಷಯ. ಎಲ್ಲ ರೀತಿಯಲ್ಲಿಯೂ ಕುಟುಂಬದ ಎಲ್ಲಾ ಸದಸ್ಯರ ಕಾಳಜಿ ಮಾಡಿಯೂ ಕೂಡ ಅವರ ಅಸಹನೆ,ಕೋಪ ಹಾಗೂ ಅಸಮಾಧಾನಗಳಿಗೆ ಈಡಾಗುವ ಹೆಣ್ಣು ಮಗಳು ಮತ್ತೆ ಮತ್ತೆ ಅವರ ಕಾಳಜಿ ಮಾಡುತ್ತಾ ಅವರು ತನ್ನ ಸೇವೆಯನ್ನು ಗುರುತಿಸಲಿ, ಶ್ರಮವನ್ನು ಅರಿಯಲಿ ಎಂದು ಬಯಸುತ್ತಾಳೆ... ಇದನ್ನು ಮನೋವೈಜ್ಞಾನಿಕ ಭಾಷೆಯಲ್ಲಿ ಟ್ರಾಮಾ ಬಾಂಡಿಂಗ್ ಎಂದು ಕರೆಯುತ್ತಾರೆ.

ಇದು ಕೇವಲ ಹೆಣ್ಣು ಮಕ್ಕಳಿಗೆ ಮಾತ್ರವಲ್ಲ ಕೆಲ ಗಂಡಸರಿಗೂ ಕೂಡ ಅನ್ವಯವಾಗುತ್ತದೆ. ಬಹುತೇಕ ಕುಟುಂಬಗಳಲ್ಲಿ ಕುಟುಂಬದ ಜವಾಬ್ದಾರಿಯನ್ನು ಹೊತ್ತು ಗಂಡಸರು ಕೂಡ ಈ ರೀತಿಯ ಟ್ರಾಮಾ ಬಾಂಡಿಂಗ್ ಗೆ ಒಳಗಾಗಿರುತ್ತಾರೆ

ನಮ್ಮನ್ನು ಪದೇಪದೇ ನೋಯಿಸುವ ಅವಮಾನಿಸುವ ವ್ಯಕ್ತಿಗಳ ಬಳಿ ಮತ್ತೆ ಮತ್ತೆ ನಾವು ಸಿಲುಕಿಕೊಳ್ಳುವುದೇ ಟ್ರಾಮಾ ಬಾಂಡಿಂಗ್... ಕನ್ನಡದಲ್ಲಿ ಆಘಾತ ಬಂಧ ಎಂದು ಇದನ್ನು ನಾವು ಹೇಳುತ್ತೇವೆ.

ಅತ್ಯಂತ ಹೀನಾಯವಾಗಿ ಗದರಿ ಅವಮಾನಿಸಿದ ವ್ಯಕ್ತಿ ಮುಂದಿನ ಕೆಲವೇ ನಿಮಿಷಗಳಲ್ಲಿ ಅತ್ಯಂತ ಕರುಣಾಜನಕವಾಗಿ ಕ್ಷಮೆ ಯಾಚಿಸುತ್ತಾ ಪ್ರೀತಿಪೂರ್ವಕವಾಗಿ ಮಾತನಾಡುತ್ತಾರೆ... ಅವರ ಮಾತಿನಲ್ಲಿ ತಾವು ಮಾಡಿದ ತಪ್ಪಿನ ಕುರಿತು ವಿಷಾದ ಭಾವ ಇರುತ್ತದೆ. ಈ ರೀತಿಯ ಅನಿರೀಕ್ಷಿತ ವರ್ತನೆಗೆ ಕಾರಣ ಅವರ ಮೆದುಳಿನಲ್ಲಿ ಹಾರ್ಮೋನುಗಳ ಸ್ರವಿಕೆಯಲ್ಲಿ ಉಂಟಾಗುವ ವ್ಯತ್ಯಾಸ. ತಮಗೆ ಹಾನಿ ಉಂಟು ಮಾಡುವ ವ್ಯಕ್ತಿಯೇ ತಮ್ಮನ್ನು ಇನ್ನಿಲ್ಲದಂತೆ ಪ್ರೀತಿಸುತ್ತಾನೆ ಎಂದು ಅವರು ನಂಬುವಂತೆ ಮಾಡುತ್ತದೆ. ನೀವು ನೋಡಿರಬಹುದು...ಬಹುತೇಕ ಹೆಣ್ಣು ಮಕ್ಕಳು ಅಯ್ಯೋ ! ನಮ್ಮ ಮನೆಯವರ ಸ್ವಭಾವ ಬಿಡಿ, ಕ್ಷಣ ಪಿತ್ತ! ಕ್ಷಣ ಚಿತ್ತ! ಎಂದು ತಮ್ಮ ಗಂಡನ ಸ್ವಭಾವವನ್ನು ಮುಚ್ಚಿ ಹಾಕಿಬಿಡುತ್ತಾರೆ. ಹಾಗೆ ತಮ್ಮನ್ನು ಹೀನಾಮಾನವಾಗಿ ಬೈದ ವ್ಯಕ್ತಿಯೇ ತಮ್ಮನ್ನು ಪುರಸ್ಕರಿಸಲಿ ಎಂದು ನಿರೀಕ್ಷಿಸುತ್ತಾರೆ ಇದು ಮೊದಲನೆಯ ಲಕ್ಷಣ ಉಳಿದವರು ನಿಮ್ಮಿಂದ ಬಹಳಷ್ಟನ್ನು ನಿರೀಕ್ಷಿಸುತ್ತಾರೆ. ಅವರ ನಿರೀಕ್ಷೆಗಳನ್ನು ಪೂರೈಸುವ ನಿಟ್ಟಿನಲ್ಲಿ ನೀವು ನಿಮ್ಮ ತನು, ಮನ ಹಾಗೂ ಭಾವಗಳ ಶಕ್ತಿಯನ್ನೇ ಖಾಲಿ ಮಾಡಿಕೊಳ್ಳುತ್ತೀರಿ. ಆದರೂ ಕೂಡ ಅವರಿಗೆ ತೃಪ್ತಿಯಾಗುವುದಿಲ್ಲ.... ಆದರೂ ನೀವು ಕೈ ಬಿಡದೆ ಅವರ ಮನವೊಲಿಸಲು ಮತ್ತೆ ಮತ್ತೆ ನಿರಂತರವಾಗಿ ಪ್ರಯತ್ನಿಸುತ್ತಲೇ ಇರುತ್ತೀರಿ... ಇದು ಕೂಡ ಟ್ರಾಮಾ ಬಾಂಡಿಂಗ ನ ಒಂದು ವಿಧ ನಿಮ್ಮಿಂದ ಅಪಾರವಾದ ನಿರೀಕ್ಷೆಯನ್ನು ಇಟ್ಟುಕೊಂಡಿರುವ ಈ ಸಂಬಂಧದಲ್ಲಿ ನಿಮಗೆ ಕೇವಲ ಉದ್ವೇಗ ಮತ್ತು ಬಿಕ್ಕಟ್ಟುಗಳು ಮಾತ್ರ ದೊರೆಯುತ್ತವೆ.

ಮಾನಸಿಕ ಸ್ತಿಮಿತತೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗದ, ರಕ್ಷಣಾತ್ಮಕ ಭಾವವೂ ಇಲ್ಲದ ಒಂದು ಬಗೆಯಲ್ಲಿ ಆಕ್ರಮಿಸಿಕೊಳ್ಳುವ ರೀತಿಯಲ್ಲಿ ತೋಚುವ ಇಂತಹ ಬಂಧನ ಒಂದೊಮ್ಮೆ ಸಾವು ಬದುಕಿನ ಮಧ್ಯದ ತೂಗುಯ್ಯಾಲೆ ಯಂತೆ ಭಾಸವಾದರೆ ಅಚ್ಚರಿಯಿಲ್ಲ. ಇಂತಹ ಒಂದು ಕೌಟುಂಬಿಕ ಆಘಾತ ಬಂಧವು ನಿಮ್ಮಲ್ಲಿ ಕೇವಲ ತಪ್ಪಿತಸ್ಥ ಭಾವ ಮತ್ತು ಮಾನಸಿಕ ಹಾಗೂ ಕೌಟುಂಬಿಕವಾಗಿ ಅಭದ್ರತೆಯನ್ನು ಉಂಟುಮಾಡುತ್ತದೆ. ಹಾಗಾದರೆ ಇದಕ್ಕೆ ಪರಿಹಾರ ಇಲ್ಲವೇ ನೀವು ಹುಟ್ಟುವ ಮುನ್ನ, ನಿಮ್ಮ ಕಾಲದ ನಂತರವೂ ಕೂಡ ಪರಿಸ್ಥಿತಿ ಹೀಗೆಯೇ ಇರುತ್ತದೆ ಎನ್ನುವುದಾದರೆ ಪ್ರತಿಯೊಂದಕ್ಕೂ ಹೊಂದಿಕೊಳ್ಳುವುದನ್ನು ಬಿಟ್ಟುಬಿಡಿ.

ನಿಮ್ಮ ಕೈಲಾದಷ್ಟು ಕೆಲಸಗಳನ್ನು ಮಾತ್ರ ಮಾಡಿ ಮುಖ್ಯವಾಗಿ ನಿಮ್ಮ ಮಕ್ಕಳನ್ನು ಅವರ ವೈಯಕ್ತಿಕ ಕೆಲಸ ಕಾರ್ಯಗಳನ್ನು ಅವರೇ ಮಾಡಿಕೊಳ್ಳುವಷ್ಟು ಸ್ವಾವಲಂಬಿಗಳನ್ನಾಗಿಸಿ. ಕುಟುಂಬದ ಇತರ ಸದಸ್ಯರು ನಿಮ್ಮನ್ನು ಪದೇಪದೇ ಹೀನಾಯವಾಗಿ ನೋಡಿದಾಗ ಅವರ ಕುರಿತು ಒಂದು ನಿರ್ಲಕ್ಷ ಧೋರಣೆಯನ್ನು ತಾಳಿ... ನೀವೇನು ಅವರಿಗೆ ಎಲ್ಲವನ್ನೂ ಮಾಡಿಕೊಡುತ್ತೇನೆ ಎಂದು ಬಾಂಡ್ ಬರೆದು ಕೊಟ್ಟಿಲ್ಲ ತಾನೇ ? ನಿಮ್ಮ ವೈಯುಕ್ತಿಕ ಆಸೆ ಆಕಾಂಕ್ಷೆಗಳಿಗೆ ಬೆಲೆ ಕೊಡಿ.

ನಿಮಗೆ ನೀವೇ ತಪ್ಪಿತಸ್ಥ ಭಾವನೆಯನ್ನು ಹೊಂದುವುದು ಬೇಡ. ಎಲ್ಲಾ ಕಾಲದಲ್ಲಿಯೂ ಎಲ್ಲರನ್ನೂ ಒಪ್ಪಿಸಲು ಸಾಧ್ಯವಿಲ್ಲ ಅಂತೆಯೇ ನಿಮ್ಮ ಮನಸ್ಸಿಗೆ ಒಪ್ಪಿಗೆ ಆಗುವಷ್ಟು ಜವಾಬ್ದಾ-ರಿಗಳನ್ನು ಮಾತ್ರ ಹೊತ್ತು ನಡೆಯಿರಿ... ಅತಿಯಾಗಿ ಎಲ್ಲವನ್ನು ನೀವೇ ಮೈಮೇಲೆ ಎಳೆದುಕೊಳ್ಳುವ ಮೂಲಕ ಒದ್ದಾಡಬೇಡಿ. ಹೇಗಿದ್ದರೂ ನೀವು ಖಂಡಿತವಾಗಿಯೂ ಮಾಡುತ್ತೀರಿ ಎಂಬ ಭಾವವನ್ನು ಸೃಷ್ಟಿಸಬೇಡಿ.... ನಿಮ್ಮನ್ನು ಒಂದು ವ್ಯಕ್ತಿಯಾಗಿ ನೋಡದವರಿಂದ ನೀವು ಒಳಿತನ್ನು ನಿರೀಕ್ಷಿಸಬೇಡಿ ಬದಲಾಗಿ ನಿಮ್ಮನ್ನು ನೀವು ಪ್ರೀತಿಸುವುದನ್ನು ನಿಮ್ಮ ಆತ್ಮಾಭಿಮಾನವನ್ನು ಕಾಯ್ದುಕೊಳ್ಳುವುದನ್ನು ಕಾಯ್ದುಕೊಳ್ಳಿ.

ನಿಮ್ಮನ್ನು ನೀವು ಹೆಚ್ಚು ಅರಿತುಕೊಳ್ಳಿ. ನಿಮ್ಮ ಬೇಕು ಬೇಡಗಳಿಗೆ ಬೆಲೆ ಕೊಡಿ. ಇತರರು ಕೇವಲ ನಿಮ್ಮಿಂದ ನಿರೀಕ್ಷಿಸುತ್ತಾರೆ ಎಂದಾದರೆ ನಿಮ್ಮ ನಿರೀಕ್ಷೆಗಳನ್ನು ಕೂಡ ಅವರಿಗೆ ಹೇಳಿ ಅವರ ಪ್ರತಿಕ್ರಿಯೆಯನ್ನು ನೋಡಿ. ನಿರಂತರವಾಗಿ ಶೋಷಣೆಗೊಳಗಾಗುವುದು ಆತ್ಮಗೌರವವನ್ನು ಕಳೆದುಕೊಂಡ ವ್ಯಕ್ತಿ ಮಾತ್ರ.... ಒಂದು ಪುಟ್ಟ ನಾಯಿ ಮರಿ ಕೂಡ ತನ್ನ ಗುರುತಿಸುವಿಕೆಗೆ ಹೋರಾಡುತ್ತದೆ... ತನ್ನನ್ನು ಸಾಕಿದವರ ಮೇಲೆ ಗುರುಗುಟ್ಟುತ್ತದೆ ಅಂತಹದರಲ್ಲಿ ಮನುಷ್ಯರಾಗಿರುವ ನೀವು ನಿಮ್ಮದೇ ವೈಯುಕ್ತಿಕ ಹಕ್ಕುಗಳನ್ನು ಪಡೆಯಲು ತುಸು ನಿಷ್ಠುರವಾದರೂ ಪರವಾಗಿಲ್ಲ...ಏನಂತೀರಾ



ವೀಣಾ ಹೇಮಂತ್ ಗೌಡ ಪಾಟೀಲ್

# ಮೊಗುವಿಗೆ ಅಚ್ಚುವ ಕಾಡಿಗೆ ಗ್ರಾಮೀಣ ಬದುಕಿನ ಸೊಗಡು, ಪರಂಪರೆ ಮತ್ತು ನೆನಪುಗಳ ಕೊಂಡಿ

ನಮ್ಮ ಗ್ರಾಮೀಣ ಬದುಕು ಎಂದರೆ ಕೇವಲ ಹೊಲ, ಗದ್ದೆ, ಮನೆ, ಜಾನುವಾರು ಮತ್ತು ಕೃಷಿ ಮಾತ್ರವಲ್ಲ. ಅದರೊಂದಿಗೆ ಬೆಸೆದುಕೊಂಡಿರುವ ಅನೇಕ ಸಣ್ಣಪುಟ್ಟ ವಸ್ತುಗಳು, ಆಚ-'ರಣೆಗಳು, ಸಂಪ್ರದಾಯಗಳು ಮತ್ತು ಹಿರಿಯರು ಪಾಲಿಸಿಕೊಂಡು ಬಂದ ಜೀವನ ಪದ್ಧತಿಗಳು ನಮ್ಮ ಜನಪದ ಸಂಸ್ಕೃತಿಯ ಶ್ರೀಮಂತಿಕೆಯನ್ನು ಸಾರುತ್ತವೆ. ಅಂತಹ ಗ್ರಾಮೀಣ ಪರಂಪರೆಯ ಭಾಗವಾಗಿರುವ ಮೊಗುವಿಗೆ ಅಚ್ಚುವ ಕಾಡಿಗೆ ಕೂಡ ತನ್ನದೇ ಆದ ವಿಶೇಷ ಸ್ಥಾನವನ್ನು ಹೊಂದಿದೆ.

ಹಿಂದಿನ ಕಾಲದಲ್ಲಿ ಹಳ್ಳಿಗಳಲ್ಲಿ ಜೀವನ ಬಹಳ ಸರಳವಾಗಿತ್ತು. ಇಂದು ಮಾರುಕಟ್ಟೆಯಲ್ಲಿ ಸುಲಭವಾಗಿ ದೊರೆಯುವ ಅನೇಕ ವಸ್ತುಗಳು ಅಂದಿನ ದಿನಗಳಲ್ಲಿ ಎಲ್ಲ-ರಿಗೂ ಲಭ್ಯವಿರಲಿಲ್ಲ. ಆಗ ಮನೆಯಲ್ಲಿಯೇ ಅಥವಾ ಸ್ಥಳೀಯವಾಗಿ ದೊರೆಯುವ ನೈಸರ್ಗಿಕ ವಸ್ತುಗಳನ್ನು ಬಳಸಿಕೊಂಡು ಅಗತ್ಯ ವಸ್ತುಗಳನ್ನು ಸಿದ್ಧಪಡಿಸಿಕೊಳ್ಳುವ ಪದ್ಧತಿ ಇತ್ತು. ಹಿರಿಯ-ರಿಗೆ ಇಂತಹ ವಸ್ತುಗಳ ತಯಾರಿಕೆ ಮತ್ತು ಬಳಕೆಯ ಬಗ್ಗೆ ಅಪಾರವಾದ ಅನುಭವವಿತ್ತು. ಅವರ ಕೈಚಳಕದಲ್ಲಿ ತಯಾರಾಗುತ್ತಿದ್ದ ವಸ್ತುಗಳಲ್ಲಿ ಪ್ರಕೃತಿಯ ನಂಟು ಮತ್ತು ಗ್ರಾಮೀಣ ಬದುಕಿನ ಸರಳತೆ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಮೊಗುವಿಗೆ ಅಚ್ಚುವ ಕಾಡಿಗೆಯೂ ಇದೇ ರೀತಿಯ ಒಂದು ಸಾಂಪ್ರದಾಯಿಕ ಬಳಕೆಯ ವಸ್ತುವಾಗಿದೆ. ಇದರೊಂದಿಗೆ ಗ್ರಾಮೀಣ ಕುಟುಂಬಗಳ ನೆನಪುಗಳು, ಹಿರಿಯರ ಅನುಭವ ಮತ್ತು ತಲೆಮಾರುಗಳಿಂದ ಬಂದ ಆಚರಣೆಗಳು ಬೆಸೆದುಕೊಂಡಿವೆ. ಮಗುವನ್ನು ಪ್ರೀತಿಯಿಂದ ನೋಡಿಕೊಳ್ಳುವ ಸಂದರ್ಭದಲ್ಲಿ ಹಿರಿಯರು ಬಳಸುತ್ತಿದ್ದ ಸಾಂಪ್ರದಾಯಿಕ ವಸ್ತುಗಳಲ್ಲಿ ಇದಕ್ಕೂ ಒಂದು ಸ್ಥಾನವಿತ್ತು. ಮಗುವಿನ ಸೌಂದರ್ಯ, ಆರೋಗ್ಯ ಮತ್ತು ಆರೈಕೆಯ ಕುರಿತಾಗಿ ಹಿಂದಿನ ಕಾಲದ ಜನರು ತಮ್ಮದೇ ಆದ ನಂಬಿಕೆ ಮತ್ತು ಅನುಭವಗಳನ್ನು ಹೊಂದಿದ್ದರು.

**ಹಿರಿಯರ ಕೈಚಳಕದ ವಿಶೇಷತೆ**



ಹಿಂದಿನ ಕಾಲದಲ್ಲಿ ಇಂತಹ ವಸ್ತುಗಳನ್ನು ಸಿದ್ಧಪಡಿಸುವ ಕೆಲಸದಲ್ಲಿ ಮನೆಯ ಹಿರಿಯ ಮಹಿಳೆಯರ ಪಾತ್ರ ಬಹಳ ಮುಖ್ಯವಾಗಿ-ತ್ತು. ಅವರು ತಮ್ಮ ಹಿರಿಯರಿಂದ ಕಲಿತ ವಿಧಾನವನ್ನು ತಮ್ಮ ಮಕ್ಕಳಿಗೂ, ಮೊಮ್ಮಕ್ಕಳಿಗೂ ತಿಳಿಸುತ್ತಿದ್ದರು. ಹೀಗಾಗಿ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಕೇವಲ ವಸ್ತುವಿನ ಬಳಕೆಯಷ್ಟೇ ಅಲ್ಲ, ಅದರೊಂದಿಗೆ ಸಂಬಂಧಿಸಿದ ಜ್ಞಾನ ಮತ್ತು ಸಂಪ್ರದಾಯವೂ ಸಾಗುತ್ತಿತ್ತು. ಅಜ್ಜಿ ಅಥವಾ ಅಮ್ಮ ಮಗುವನ್ನು ಮಡಿಲಲ್ಲಿ ಕೂ-ರಿಸಿಕೊಂಡು ಪ್ರೀತಿಯಿಂದ ಆರೈಕೆ ಮಾಡುವ ದೃಶ್ಯ ಗ್ರಾಮೀಣ ಬದುಕಿನ ಆತ್ಮೀಯತೆಯ ಪ್ರತೀಕವಾಗಿ-ತ್ತು. ಇಂತಹ ಸಂದರ್ಭಗಳಲ್ಲಿ ಬಳಸುತ್ತಿದ್ದ ಸಾಂಪ್ರದಾಯಿಕ ವಸ್ತುಗಳು ಇಂದು ನೋಡಲು ಸಣ್ಣದಾಗಿ ಕಾಣಬಹುದು. ಆದರೆ ಅವುಗಳ ಹಿಂದೆ ಅಡಗಿರುವ ನೆನಪುಗಳು ಮಾತ್ರ ಬಹಳ ದೊಡ್ಡವು.

**ಪ್ರಕೃತಿಯೊಂದಿಗೆ ಬೆಸೆದುಕೊಂಡ ಬದುಕು**

ಹಿಂದಿನ ಗ್ರಾಮೀಣ ಜೀವನದಲ್ಲಿ ಪ್ರಕೃತಿಗೆ ಬಹಳ ಮಹತ್ವವಿತ್ತು. ಕಾಡು, ಮರ, ಸಸ್ಯ, ಮಣ್ಣು ಮತ್ತು ಜಾನುವಾರುಗಳೊಂದಿಗೆ ಜನರ ಬದುಕು ನಿಕಟವಾಗಿ ಬೆಸೆದುಕೊಂಡಿತ್ತು. ಸ್ಥಳೀಯವಾಗಿ ದೊರೆಯುವ ವಸ್ತುಗಳನ್ನು ಬಳಸಿಕೊಂಡು ದೈನಂದಿನ ಜೀವನದ ಅನೇಕ ಅಗತ್ಯಗಳನ್ನು ಪೂರೈಸಿಕೊಳ್ಳಲಾಗುತ್ತಿತ್ತು. ಈ ರೀತಿಯ ಬದುಕಿನಲ್ಲಿ ಕಾಡಿಗೆಯಂತಹ ಸಾಂಪ್ರದಾಯಿಕ ವಸ್ತುಗಳು ಸಹಜವಾಗಿಯೇ ಜನರ ಜೀವನದ ಭಾಗವಾಗಿದ್ದವು. ಇವುಗಳಲ್ಲಿ ಕೃತಕತೆಯಿಗಿಂತ ಸಹಜತೆ ಮತ್ತು ಸ್ಥಳೀಯ ಜ್ಞಾನದ ಮಹತ್ವ ಹೆಚ್ಚಿತ್ತು. ಆದ್ದರಿಂದ ಇಂತಹ ವಸ್ತುಗಳನ್ನು ನಮ್ಮ ಗ್ರಾಮೀಣ ಜೀವನಶೈಲಿಯ ಒಂದು ಸಣ್ಣ ಪ್ರತಿಬಿಂಬವೆಂದು ಹೇಳಬಹುದು.

**ಬದಲಾಗುತ್ತಿರುವ ಕಾಲಘಟ್ಟ**

ಕಾಲ ಬದಲಾಗಿದೆ. ಗ್ರಾಮೀಣ ಬದುಕಿನಲ್ಲಿಯೂ ಸಾಕಷ್ಟು ಬದಲಾವಣೆಗಳಾಗಿವೆ. ಆಧುನಿಕ ಜೀವನಶೈಲಿ, ಮಾರುಕಟ್ಟೆಯಲ್ಲಿ ದೊರೆಯುವ ಸಿದ್ಧ ವಸ್ತುಗಳು ಮತ್ತು ಬದಲಾಗುತ್ತಿರುವ ಕುಟುಂಬ ವ್ಯವಸ್ಥೆಯಿಂದಾಗಿ ಹಿಂದಿನ ಕಾಲದಲ್ಲಿ ಸಾಮಾನ್ಯವಾಗಿದ್ದ ಅನೇಕ ವಸ್ತುಗಳು ಇಂದು ಅಪರೂಪವಾಗುತ್ತಿವೆ. ಒಮ್ಮೆ ಮನೆಯ ಹಿರಿಯರಿಗೆ ಚೆನ್ನಾಗಿ ಪರಿಚಿತವಾಗಿದ್ದ ಕಾಡಿಗೆ, ಗ್ರಾಮೀಣ ಉಪಕರಣಗಳು ಮತ್ತು ವಿವಿಧ ಸಾಂಪ್ರದಾಯಿಕ ವಸ್ತುಗಳ ಬಗ್ಗೆ ಇಂದಿನ ಯುವ ಪೀಳಿಗೆಗೆ ಹೆಚ್ಚಿನ ಮಾಹಿತಿ ಇಲ್ಲದಿರುವುದು ಸಹಜ. ಈ ಬದಲಾವಣೆಯ ನಡುವೆ ನಮ್ಮ ಪರಂಪರೆಯ ಜ್ಞಾನ ನಿಧಾನವಾಗಿ ಮರೆಯಾಗುವ ಸಾಧ್ಯತೆಯೂ ಇದೆ. ಆದ್ದರಿಂದ ಇಂತಹ ಗ್ರಾಮೀಣ ಸಂಪ್ರದಾಯಗಳ ಕುರಿತು ದಾಖಲಿಸುವುದು ಬಹಳ ಮುಖ್ಯ. ಹಿರಿಯರ ಅನುಭವಗಳನ್ನು ಕೇಳಿ ತಿಳಿದುಕೊಳ್ಳುವುದು, ಅವುಗಳ ಹಿನ್ನೆಲೆಯನ್ನು ಅರಿತುಕೊಳ್ಳುವುದು ಮತ್ತು ಮುಂದಿನ ಪೀಳಿಗೆಗೆ ಪರಿಚಯಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

**ನೆನಪುಗಳಲ್ಲಿ ಉಳಿಯುವ ಕಾಡಿಗೆ**

ಮೊಗುವಿಗೆ ಅಚ್ಚುವ ಕಾಡಿಗೆ ಎಂಬುದು ಕೇವಲ ಒಂದು ಸಾಂಪ್ರದಾಯಿಕ ವಸ್ತುವಿನ ಹೆಸರು ಮಾತ್ರವಲ್ಲ. ಅದರೊಂದಿಗೆ ಹಳ್ಳಿಯ ಮನೆಗಳ ನೆನಪುಗಳಿವೆ. ಅಜ್ಜ-ಅಜ್ಜಿಯರ ಮಮತೆಯಿದೆ. ತಾಯಿಯ ಆರೈಕೆಯಿದೆ. ಮಗುವಿನ ನಗುವಿದೆ. ಮನೆಯಂಗಳದಲ್ಲಿ ನಡೆದ ಸರಳ ಬದುಕಿನ ಚಿತ್ರಣವಿದೆ. ಹಿಂದಿನ ಕಾಲದ ಬದುಕನ್ನು ನೆನಪಿಸಿಕೊಂಡಾಗ ಇಂತಹ ಸಣ್ಣಪುಟ್ಟ ವಸ್ತುಗಳೇ ದೊಡ್ಡ ನೆನಪುಗಳನ್ನು ನಮ್ಮ ಮುಂದೆ ತರುತ್ತವೆ. ಅವು ನಮ್ಮ ಕುಟುಂಬದ ಕಥೆಗಳೊಂದಿಗೆ ಬೆಸೆದುಕೊಂಡಿರುತ್ತವೆ. ಅದಕ್ಕಾಗಿಯೇ ಜನಪದ ಸಂಸ್ಕೃತಿಯಲ್ಲಿ ಸಣ್ಣ ವಸ್ತುಗಳಿಗೂ ದೊಡ್ಡ ಮಹತ್ವವಿದೆ.

**ಪರಂಪರೆಯನ್ನು ಉಳಿಸುವ ಅಗತ್ಯ**

ಇಂದಿನ ಪೀಳಿಗೆ ಆಧುನಿಕತೆಯನ್ನು ಸ್ವೀಕರಿಸುವುದರ ಜೊತೆಗೆ ತನ್ನ ಬೇರುಗಳನ್ನು ಮರೆಯಬಾರದು. ನಮ್ಮ ಪೂರ್ವಜರು ಬಳಸಿದ ವಸ್ತುಗಳು, ಅವರ ಜೀವನ ಪದ್ಧತಿ ಮತ್ತು ಗ್ರಾಮೀಣ ಜ್ಞಾನವನ್ನು ದಾಖಲಿಸುವುದು ಅಗತ್ಯ. ಏಕೆಂದರೆ ಒಂದು ಸಂಪ್ರದಾಯ ಕಳೆದುಹೋದರೆ ಅದರೊಂದಿಗೆ ಒಂದು ಕಾಲಘಟ್ಟದ ನೆನಪು ಕೂಡ ಕಳೆದುಹೋಗುತ್ತದೆ. ಹಿರಿಯರಿಗೆ ಇಂತಹ ಸಾಂಪ್ರದಾಯಿಕ ವಸ್ತುಗಳ ಬಗ್ಗೆ ತಿಳಿದಿದ್ದರೆ, ಅವರಿಂದ ಮಾಹಿತಿ ಪಡೆದು ಯುವಕರು ದಾಖಲಿಸಬೇಕು. ಶಾಲಾ-ಕಾಲೇಜುಗಳಲ್ಲಿಯೂ ಜನಪದ ಸಂಸ್ಕೃತಿ ಮತ್ತು ಗ್ರಾಮೀಣ ಪರಂಪರೆಯ ಕುರಿತು ಮಕ್ಕಳಿಗೆ ಪರಿಚಯ ಮಾಡಿಕೊಡಬೇಕು. ಸ್ಥಳೀಯ ಕಲಾವಿದರು ಮತ್ತು ಸಾಂಪ್ರದಾಯಿಕ ವಸ್ತುಗಳನ್ನು ತಯಾರಿಸುವವರಿಗೆ ಪ್ರೋತ್ಸಾಹ ನೀಡಬೇಕು.

**ನಮ್ಮ ಮಣ್ಣಿನ ಹೆಮ್ಮೆ**

ಮೊಗುವಿಗೆ ಅಚ್ಚುವ ಕಾಡಿಗೆಯಂತಹ ಸಾಂಪ್ರದಾಯಿಕ ವಸ್ತುಗಳು ನಮ್ಮ ಗ್ರಾಮೀಣ ಬದುಕಿನ ಸರಳತೆ ಮತ್ತು ಸಹಜತೆಯನ್ನು ನೆನಪಿಸುತ್ತವೆ. ಇವುಗಳ ಹಿಂದೆ ಯಾವುದೇ ದೊಡ್ಡ ಉದ್ಯಮದ ಕಥೆಯಿಲ್ಲ; ಬದಲಿಗೆ ಮನೆಯ ಹಿರಿಯರ ಅನುಭವ, ಕೈಚಳಕ ಮತ್ತು ಪ್ರಕೃತಿಯೊಂದಿಗೆ ಹೊಂದಿಕೊಂಡ ಬದುಕಿನ ಕಥೆಯಿದೆ. ಆಧುನಿಕತೆ ನಮ್ಮ ಬದುಕನ್ನು ಸುಲಭಗೊಳಿಸಿದೆ. ಆದರೆ ನಮ್ಮ ಸಂಸ್ಕೃತಿಯ ಬೇರುಗಳನ್ನು ಉಳಿಸುವ ಜವಾಬ್ದಾರಿ ನಮ್ಮ ಮೇಲಿದೆ. ಹಳೆಯ ಸಂಪ್ರದಾಯಗಳನ್ನು ಅಂ-ಧವಾಗಿ ಅನುಸರಿಸುವುದಕ್ಕಿಂತ, ಅವುಗಳ ಸಾಂಸ್ಕೃತಿಕ ಮಹತ್ವವನ್ನು ಅರ್ಥಮಾಡಿಕೊಂಡು ದಾಖಲಿಸುವುದು ಮತ್ತು ಉಳಿಸುವುದು ಮುಖ್ಯ. ಮಣ್ಣಿನ ವಾಸನೆಯಲ್ಲೇ ನಮ್ಮ ಬದುಕಿನ ಕಥೆಯಿದೆ. ಹಿರಿಯರ ಕೈಚಳಕದಲ್ಲೇ ನಮ್ಮ ಪರಂಪರೆಯ ನೆನಪಿದೆ. ಮೊಗುವಿಗೆ ಅಚ್ಚುವ ಕಾಡಿಗೆಯಂತಹ ಸಣ್ಣ ಸಾಂಪ್ರದಾಯಿಕ ವಸ್ತುಗಳಲ್ಲೂ ನಮ್ಮ ಗ್ರಾಮೀಣ ಸಂಸ್ಕೃತಿಯ ದೊಡ್ಡ ಇತಿಹಾಸ ಅಡಗಿದೆ. ಆ ನೆನಪುಗಳು ಮರೆಯಾಗದಂತೆ ಉಳಿಸುವುದು ಇಂದಿನ ಪೀಳಿಗೆಯ ಜವಾಬ್ದಾರಿ.

ವಿನಾಯಕ ಬಿ. ತಿಪ್ಪಣ್ಣನವರ

ಈ ನಮ್ಮ ಧೃತಿ ನ್ಯೂಸ್
E NAMMA DHURTHI NEWS
KANNADA DAILY NEWS PAPER

# ಸಮಯಾತೀತ ಕಲಿಕೆಗಳು

ನಮ್ಮ ಬದುಕಿನಲ್ಲಿ ನಾವು ಪ್ರತಿ ದಿನ ಕಲಿಯುತ್ತಲೇ ಇರುತ್ತೇವೆ ಹುಟ್ಟಿದ ಪ್ರತಿಯೊಬ್ಬ ಮನುಷ್ಯನು ಸಾಯುವ ಕಡೆಯ ಗಳಿಗೆಯವರೆಗೂ ಕಲಿಯುತ್ತಲೇ ಇರುತ್ತಾನೆ ಆದರೆ ಕೆಲ ವಿಷಯಗಳನ್ನು ಬದುಕಿನ ಆರಂಭದಲ್ಲಿ ಕಲಿತರೆ ಬದುಕಿನ ಕೊನೆಯ ದಿನಗಳಲ್ಲಿ ನಾನು ಹಾಗೆ ಮಾಡಿದ್ದರೆ ನಾನು ಹೀಗೆ ಇದ್ದರೆ ಎಂಬ ರೇಗಳ ಪ್ರಪಂಚವನ್ನು ನಮ್ಮ ನಿಟ್ಟುಸಿರುಗಳು ಆಳ ಬೇಕಾಗುವುದಿಲ್ಲ. 90 ವರ್ಷ ಪೂರೈಸಿದ ಓರ್ವ ಝೆನ್ ಸನ್ಯಾಸಿಯು ಬದುಕಿನಲ್ಲಿ ಸಮಯಕ್ಕೆ ಅತೀತವಾಗಿ ನಾವು ಅಳವಡಿಸಿಕೊಳ್ಳಬಹುದಾದ ಕೆಲವು ವಿಷಯಗಳನ್ನು ಹೀಗೆ ಪ್ರತಿಪಾದಿಸಿದ್ದಾನೆ.

ಶಾಂತಿಯನ್ನು ಕಾಯ್ದುಕೊಳ್ಳಿ.... ನಿಮ್ಮ ಬದುಕಿನಲ್ಲಿ ನಿಮ್ಮ ಮನಸ್ಸು ಅತ್ಯಮೂಲ್ಯವಾದ ಆಸ್ತಿ. ನಿಮ್ಮ ಮನಸ್ಸು ಮತ್ತು ಬುದ್ಧಿಗಳ ಮೇಲೆ ನಿಮ್ಮದೇ ಆದ ಸ್ವಯಂ ನಿಯಂತ್ರಣವನ್ನು ಹೊಂದಿರಬೇಕು. ಅದು ನಿಮ್ಮ ಮಾನಸಿಕ ಶಾಂತಿಯನ್ನು ಕಾಯ್ದುಕೊಳ್ಳಲು ಸಹಾಯಕವಾಗುತ್ತದೆ. ಎಲ್ಲ ವಿಷಯಗಳಿಗೂ ಎಲ್ಲಾ ಸಮಯದಲ್ಲಿಯೂ ಪ್ರತಿಕ್ರಿಯೆ ನೀಡುವ ಅವಶ್ಯಕತೆ ಇಲ್ಲ ಎಂಬುದನ್ನು ಚಿಕ್ಕಂದಿನಿಂದಲೂ ಮಕ್ಕಳಿಗೆ ರೂಢಿಸಬೇಕು, ಏನಾದರೂ ತಪ್ಪು ಘಟಿಸಿದಾಗ ತೀವ್ರವಾಗಿ ಪ್ರತಿಕ್ರಿಯಿಸಬಾರದು. ಧ್ಯಾನದ ಮೂಲಕ ಮಾನಸಿಕ ನಿಯಂತ್ರಣವನ್ನು ಕಾಯ್ದುಕೊಳ್ಳಬೇಕು. ಧ್ಯಾನಪೂರ್ವಕವಾದ ಆಹಾರ ಸೇವನೆ ಕೂಡ ಮನಸ್ಸನ್ನು ಪ್ರಫುಲ್ಲಿತವಾಗಿರಿಸುತ್ತದೆ. ಒಳ್ಳೆಯ ಹವ್ಯಾಸಗಳು ಮನಸ್ಸಿಗೆ ನೆಮ್ಮದಿ ಹಾಗೂ ಸಂತಸವನ್ನು ನೀಡುತ್ತವೆ.

ಬದುಕಿನಲ್ಲಿ ಅತಿಯಾದ ಅವಸರ ಬೇಡ... ಅತಿಯಾದ ಅವಸರ ಅಪಘಾತಕ್ಕೆ ಕಾರಣ ಎಂಬುದು ಕೇವಲ ವಾಹನಗಳಿಗೆ ಮಾತ್ರ ಅನ್ವಯಿಸುವುದಿಲ್ಲ ನಮ್ಮ ಬದುಕಿನಲ್ಲಿ ನಾವು ಕೈಗೊಳ್ಳುವ ಕೆಲ ಅವಸರದ ನಿರ್ಧಾರಗಳು ಕೂಡ ಅಪಘಾತಗಳಿಗೆ ಕಾರಣವಾಗುತ್ತದೆ ಮಾನಸಿಕ, ಭಾವನಾತ್ಮಕ ಹಾಗೂ ಕೌಟುಂಬಿಕ ಸಂಘರ್ಷಕ್ಕೆ ಕಾರಣವಾಗುತ್ತದೆ. ಆತುರದ ನಿರ್ಧಾರಗಳು ಮತೀಯ ಸಂಘರ್ಷಕ್ಕೆ, ಕೋಮುಸಾಮರಸ್ಯವನ್ನು ಹಾಳು ಮಾಡಲು ಬಳಸಲ್ಪಟ್ಟಿರುವುದನ್ನು ನಾವು ಇತಿಹಾಸದಲ್ಲಿ ನೋಡಿಯೇ ಇದ್ದೇವೆ... ಆದ್ದ–ರಿಂದ ಕೊಂಚ ನಿಧಾನಿಸಿ ಪೂರ್ವಾಪರಗಳನ್ನು ಅರಿತು ನಂತರ ಕಾರ್ಯನಿರ್ವಹಿಸುವುದು ಒಳ್ಳೆಯದು. ಎಷ್ಟೋ ಬಾರಿ ಅವಸರದಲ್ಲಿ ನಮಗೆ ಕಾಣದ ವಿಷಯಗಳು ನಿರಾತಂಕವಾದ ಪ್ರಶಾಂತ ವಾತಾವರಣದಲ್ಲಿ ಸಮಯದಲ್ಲಿ ಅರಿವಾಗುತ್ತವೆ. ಬದುಕಿನಲ್ಲಿ ನಿಯಮಿತತೆಯನ್ನು ಇಟ್ಟುಕೊಂಡು ದೈನಂದಿನ ಕೆಲಸಗಳು ಹವ್ಯಾಸಗಳು ಹಾಗೂ ಊಟ, ತಿಂಡಿ, ನಿದ್ರೆಗಳಿಗೆ ಸಮಯವನ್ನು ವಿಭಾಗಿಸಿ ಅದಕ್ಕೆ ತಕ್ಕಂತೆ ನಡೆದುಕೊಂಡರೆ ಯಾವುದೇ ರೀತಿಯ ಅವಸರ ಮತ್ತು ಅವಘಡಗಳು ಉಂಟಾಗುವುದಿಲ್ಲ. ಸಮಯ ಪ್ರಜ್ಞೆ ಕೂಡ ಅತ್ಯುತ್ತಮವಾದ ಕಾರ್ಯನಿರ್ವಾಹಕ.

ಅಂಟಿಕೊಳ್ಳದೆ ಜೀವಿಸಿ.... ಗಟ್ಟಿಯಾಗಿ ತಬ್ಬಿಕೊಂಡರೆ ಸಂಗಾತಿಯ ಅಪ್ಪುಗೆ ಕೂಡ ಕೆಲ ಹೊತ್ತಿನ ನಂತರ ಕಸಿವಿಸಿಯನ್ನು ಉಂಟುಮಾಡುತ್ತದೆ. ಕೆಲ ಕ್ಷಣಗಳವರೆಗೆ ಮಾತ್ರ ನೆಮ್ಮದಿಯನ್ನು ನೀಡುವ ಆ ಅಪ್ಪುಗೆ ನಂತರ ಉಸಿರುಗಟ್ಟಿಸುತ್ತದೆ. ಪ್ರೀತಿ ಹಾಗೂ



ಅತಿಯಾದ ಹಚ್ಚಿಕೊಳ್ಳುವಿಕೆ ಕೂಡ. ಬದುಕಿನಲ್ಲಿ ಎಲ್ಲರನ್ನೂ ಎಲ್ಲವನ್ನೂ ಪ್ರೀತಿಸುವ ನಾವು ಒಂದು ರೀತಿಯ ನಿರ್ಲಿಪ್ತ ಮನೋಭಾವವನ್ನು ಹೊಂದಬೇಕು. ಕೆಸರಿನಲ್ಲಿರುವ ಕಮಲ ಪತ್ರದಂತೆ ನಾವು ಕೂಡ ಬದುಕಬೇಕು. ನಾವು ಅತಿಯಾಗಿ ಪ್ರೀತಿಸುವ, ಹಚ್ಚಿಕೊಂಡ ಜೀವಗಳು ನಮ್ಮನ್ನು ವಿನಾಕಾರಣ ದೂರ ಮಾಡಿದಾಗ ಉಂಟಾಗುವ ನೋವು ಅಸದಳ. ಬದಲಾಗಿ ಎಲ್ಲವನ್ನು ಅತ್ಯಂತ ಸಂಯಮದ ನಡವಳಿಕೆ, ನಿರ್ಲಿಪ್ತ ಮನೋಭಾವಗಳ ಮೂಲಕ ಎದುರಿಸಬೇಕು.

ನಮ್ಮ ವಿಪರೀತ ಪ್ರತಿಕ್ರಿಯೆಗಳ ಮೇಲೆ ನಿಯಂತ್ರಣವಿರಬೇಕು.... ಅವರಿವರ ಮೇಲೆ ನಿಯಂತ್ರಣವನ್ನು ಹೊಂದುವುದಕ್ಕಿಂತ ನಮ್ಮ ಮನಸ್ಸಿನ ಮೇಲೆ, ನಮ್ಮ ಬುದ್ಧಿಯ ಮೇಲೆ ನಮಗೆ ಹಿಡಿತವಿರಬೇಕು. ನಮ್ಮ ಬಾಯಿಂದ ತಪ್ಪು ಮಾತುಗಳು ಬರದಂತೆ ಕೆಟ್ಟ ಪ್ರತಿಕ್ರಿಯೆಗಳು ಹೊರಡದಂತೆ ನಾವು ಸದಾ ಜಾಗರೂಕ ಸ್ಥಿತಿಯಲ್ಲಿ ಇರಬೇಕು.

*ಏನೂ ಪ್ರತಿಕ್ರಿಯೆ ನೀಡದೇ ಇರುವುದೇ ನಮ್ಮ ಅತ್ಯುತ್ತಮ ಪ್ರತಿಕ್ರಿಯೆಯಾಗಿರುತ್ತದೆ ಎಷ್ಟೋ ಬಾರಿ ಇತರರು ಹೊರಿಸುವ ಆಪಾದನೆಗಳು ಹೇಳಿಕೆಗಳು ನಮ್ಮ ಕೂದಲು ಕೊಂಕಿಸದೆ ಇರುವಂತೆ ನೋಡಿಕೊಳ್ಳಲು ನಮ್ಮ ಮೌನವೇ ಬಲು ದೊಡ್ಡ ಅಸ್ತ್ರವಾಗಿ ನಮ್ಮನ್ನು ಕಾಯುತ್ತದೆ.

ಆಕಾಶದಲ್ಲಿ ಇರುವ ಚಂದ್ರನೆಡೆ ಮುಖ ಮಾಡಿ ಉಗುಳಿದಾಗ ಅದು ನಮಗೆ ಸಿಡಿಯುತ್ತದೆ ಅಲ್ಲವೇ ಇದರಿಂದ ಚಂದ್ರನ ಪ್ರಶಾಂತತೆಯನ್ನು ತಣ್ಣಗಿನ ನಡೆಯನ್ನು ಚಲಿಸುವಿಕೆಯನ್ನು ನಮಗೆ ತಡೆಯಲು ಸಾಧ್ಯವಾಗುತ್ತದೆಯೇ ಇಲ್ಲವಲ್ಲ ಅಂತೆಯೇ ತಂಗದಿರನ ಈ ತಣ್ಣಗಿನ ವ್ಯಕ್ತಿತ್ವವನ್ನು ನಮ್ಮದಾಗಿಸಿಕೊಳ್ಳಬೇಕು. ತಣ್ಣಗಿನ ಮನಸ್ಥಿತಿಯಲ್ಲಿ ನಮಗೆ ವಿಷಯಗಳು ಹೆಚ್ಚು ಅಥ–ರ್ಥವಾಗುತ್ತವೆ. ಮೌನದ ಮಾತಿನಷ್ಟು ನೇರವಾದ ಅಭಿವ್ಯಕ್ತಿ ಒಣ ಮಾತಿನಲ್ಲಿ ಇರುವುದಿಲ್ಲ. ಮೌನವು ಮನಸ್ಸಿನಲ್ಲಿ ಸ್ಪಷ್ಟತೆಯನ್ನು ಮೂಡಿಸುತ್ತದೆ ಮಾತ್ರವಲ್ಲ ಸತ್ಯದ ಭಾಷೆಯನ್ನು ಅತ್ಯಂತ ಪ್ರಖರವಾಗಿ ಅರಿವು ಮೂಡಿಸುತ್ತದೆ.

*ನಿಯಮಿತ ಅಭ್ಯಾಸಗಳು.... ದೈನಂದಿನ ನಿಯಮಿತ ಅಭ್ಯಾಸಗಳು ನಮ್ಮಲ್ಲಿ ಒಂದು ಅದ್ಭುತವಾದ ಶಕ್ತಿಯನ್ನು ಉಂಟುಮಾಡುತ್ತದೆ. ಅರಿತು ಅರಿಯದೆಯೋ ನಾವು ಸಹಜವಾಗಿ ಆ ಶಕ್ತಿಯನ್ನು ನಮ್ಮಲ್ಲಿ ಒಗ್ಗೂಡಿಸಿಕೊಂಡಿರುತ್ತವೆ ಪ್ರಾಕ್ಟೀಸ್ ಮೇಕ್ಸ್ ಮ್ಯಾನ್ ಪರ್ಫೆಕ್ಟ್ ಎಂಬಂತೆ ದೈನಂದಿನ ಅಭ್ಯಾಸಗಳು ನಮ್ಮನ್ನು ಪ್ರತಿದಿನದ ಸಂಘರ್ಷಗಳನ್ನು ಎದುರಿಸಲು ಸಜ್ಜಾಗಿಸುತ್ತವೆ. ನಿಯಮಿತ ಅಭ್ಯಾಸಗಳು ಸ್ವತಂತ್ರ ಪ್ರವೃತ್ತಿಯನ್ನು ಉಂಟುಮಾಡುತ್ತವೆ.

ನೋವಿನಿಂದ ಪಾಠ ಕಲಿಯಬೇಕು.... ಐಷಾರಾಮಿ ಬದುಕು ಕಲಿಸದ ಎಲ್ಲ ಪಾಠಗಳನ್ನು ಕಷ್ಟದ ಜೀವನ ಕಲಿಸುತ್ತದೆ. ತಟ್ಟೆ ತುಂಬ ಊಟ ಕಲಿಸದ ಬದುಕಿನ ಅತ್ಯುತ್ತಮ ಪಾಠವನ್ನು ಬರಿ ಹೊಟ್ಟೆ ಕಲಿಸುತ್ತದೆ. ಹಸಿವು, ಬಡತನ, ನೋವು,ನಿರಾಸೆಗಳು ಬದುಕಿನ ಅತ್ಯುತ್ತಮ ಪಾಠಗಳನ್ನು ಕಲಿಸಿ. ನಮ್ಮನ್ನು ದೃಢ ಚಿತ್ತರನ್ನಾಗಿಸುತ್ತವೆ. ಪ್ರತಿಯೊಬ್ಬ ಯಶಸ್ವಿ ವ್ಯಕ್ತಿಯು ತನ್ನ ಬದುಕಿನಲ್ಲಿ ಅತಿಹೆಚ್ಚಿನ ನೋವುಗಳನ್ನು ಅನುಭವಿಸಿ, ಅವಮಾನದ ಬೆಂಕಿಯಲ್ಲಿ ಬೆಂದು ಅಪರಂಜಿ ಚಿನ್ನವಾಗಿರುತ್ತಾನೆ.

ಕೊಡುಗೈ ದಾನಿಯಾಗು... ಬದುಕಿನಲ್ಲಿ ನೀನು ಪಡೆದುಕೊಂಡದ್ದಕ್ಕಿಂತ ಹೆಚ್ಚಿನದನ್ನು ಇತರರಿಗೆ ನೀಡಬೇಕು. ಕೊಟ್ಟು ಕೆಟ್ಟವರಿಲ್ಲ ಎಂದು ದಾಸರು ಹೇಳಿಲ್ಲವೇ? ದೇವರು ನಿನಗೆ ದಯಪಾಲಿಸಿದ್ದರಲ್ಲಿ ಹೆಚ್ಚಿನ ಭಾಗವನ್ನು ಇತರರಿಗೆ ನೀಡುವಲ್ಲಿ ದೊರೆಯುವ ಸಂತೃಪ್ತಿ, ಸಮಾಧಾನ ಬೇರೆಲ್ಲೂ ಸಿಗುವುದಿಲ್ಲ. ದಾನವು ನಮ್ಮ ಹೃದಯ ಶ್ರೀಮಂತಿಕೆಯನ್ನು ಹೆಚ್ಚಿಸುತ್ತದೆ, ಪ್ರೀತಿಯ ಜ್ಯೋತಿಯನ್ನು ಬೆಳಗಿಸುತ್ತದೆ... ತನಗಿಂತ ಮೊದಲು ಇತರರನ್ನು, ಸಮಾಜವನ್ನು ಕುರಿತು ಯೋಚಿಸುವ ವ್ಯಕ್ತಿಯ ಚಿಂತನೆಗಳು ಈ ಜಗತ್ತನ್ನು ಬೆಳಗಿವೆ.. ಮಾತ್ರವಲ್ಲ ಆ ಬೆಳಕಿನ ದಿವ್ಯ ಪ್ರಭೆಯಲ್ಲಿ ಮನುಕುಲದ ಉಳಿವು ಇದೆ.

*ಇತರರ ತಪ್ಪುಗಳನ್ನು ಕ್ಷಮಿಸಬೇಕು.... ಮತ್ತೊಬ್ಬರ ಮಾತು ಕ್ರಿಯೆ ವರ್ತನೆ ನಿಮ್ಮ ಮನದಲ್ಲಿ ನೆಲೆಯೂರಿದ್ದರೆ ಅದು ನಿಮಗೆ ಭಾರವಾಗುತ್ತದೆ ಪದೇ ಪದೇ ಆ ಕುರಿತು ಯೋಚಿಸಿ ನೀವು ಕೂಡ ಮನಸ್ಸನ್ನು ಹಾಳು ಮಾಡಿಕೊಳ್ಳುತ್ತೀರಿ... ಬದಲಾಗಿ ಇತರರು ನಿಮ್ಮೊಂದಿಗೆ ಕೆಟ್ಟದಾಗಿ ನಡೆದುಕೊಂಡಿದ್ದರೆ ಅದಕ್ಕೆ ಪ್ರತಿಕ್ರಿಯೆ ತೋರಿಸದೆ ಅವರ ವರ್ತನೆಯನ್ನು ಮಾತನ್ನು ಬಾಲಿಷ ಎಂದು ಪರಿಭಾವಿಸಿ ನಕ್ಕು ಅವರನ್ನು ಕ್ಷಮಿಸಿದರೆ ಮನಸ್ಸು ಹಗುರವಾಗುತ್ತದೆ. ಅದು ನಿಮ್ಮೊಳಗಿನ ಆನಂದ ಜ್ಯೋತಿಯನ್ನು ಸದಾ ಬೆಳಗಿಸುತ್ತದೆ ಕ್ಷಮೆ ಅಂತಹ ದೊಡ್ಡ ಗುಣ ಬೇರೊಂದು ಇಲ್ಲ. ಕ್ಷುಲ್ಲಕ ಘಟನೆಗಳು ವರ್ತನೆಗಳು ಮಾತುಗಳು ನಿಮ್ಮ ಮನಸ್ಸನ್ನು ನೋಯಿಸಿದರೆ ಕ್ಷಮೆಯು ನಿಮ್ಮ ಹೃದಯವನ್ನು ಸಂಪೂರ್ಣವಾಗಿ ಅರಳಿಸುತ್ತದೆ... ಅಂತಿಮವಾಗಿ ನಿಮಗೆ ಬೇಕಾಗುವ ಮಾನಸಿಕ ಶಾಂತಿಯನ್ನು ನೆಮ್ಮದಿಯನ್ನು ನೀವು ಕ್ಷಮಿಸುವ ಮೂಲಕ ಕಾಪಾಡಿಕೊಳ್ಳಬಹುದು. ಹೌದಲ್ಲವೇ ಸ್ನೇಹಿತರೆ ? ಬದುಕಿನಲ್ಲಿ ಉತ್ತಮ ಆಚಾರ ವಿಚಾರ ವ್ಯವಹಾರಗಳನ್ನು ನಾವು ಹೊಂದಿದ್ದರೆ ಅದೆಷ್ಟು ನೆಮ್ಮದಿ ಅಲ್ಲವೇ

ಪ್ರತಿಯೊಂದರಲ್ಲೂ ಒಳ್ಳೆಯದನ್ನು ನೋಡುತ್ತಾ ನಮ್ಮ ಮನಸ್ಸಿನಲ್ಲಿ ಉತ್ತಮ ವಿಚಾರಗಳಿಗೆ ಸ್ಥಳವನ್ನು ನೀಡಿ ಉತ್ತಮ ಆಚ–ಾರಗಳನ್ನು ಅನುಸರಿಸಿಕೊಂಡು ಸಾಮಾಜಿಕವಾಗಿ ಒಳ್ಳೆಯವರಾಗಿ ವ್ಯವಹರಿಸುತ್ತಾ ಸುಂದರ, ಸಭ್ಯ ನಾಗರಿಕ ಸಮಾಜದ ಭಾಗವಾಗುವ ಆಶಯ ನಮ್ಮೆಲ್ಲರದಾಗಲಿ



ವೀಣಾ ಹೇಮಂತ್ ಗೌಡ ಪಾಟೀಲ್

## ಎಡಿಬಿ ಕಾಲೇಜಿನಲ್ಲಿ ಬೃಹತ್ ಉಚಿತ ಕಣ್ಣು ಮತ್ತು ಹೃದಯ ತಪಾಸಣಾ ಶಿಬಿರ




ಹರಪನಹಳ್ಳಿ: ಪಟ್ಟಣದ ಎಡಿಬಿ ಮತ್ತು ಎಸ್‌ಎಸ್‌ಎಚ್ ಜೈನ್ ಕಾಲೇಜಿನಲ್ಲಿ ಸುರ ಸಂಭ್ರಮ ಕಾರ್ಯಕ್ರಮದ ಅಂಗವಾಗಿ ಬುಧವಾರ ಬೃಹತ್ ಉಚಿತ ಕಣ್ಣು ಮತ್ತು ಹೃದಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು.

ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಎನ್ ಸಿಸಿ ಘಟಕಗಳು, ಶಿವಮೊಗ್ಗದ ಶ್ರೀ ಕಂಚಿ ಕಾಮಕೋಟಿ ಮೆಡಿಕಲ್ ಟ್ರಸ್ಟ್ ಶಂಕರ ಕಣ್ಣಿನ ಆಸ್ಪತ್ರೆ, ಹರಪನಹಳ್ಳಿಯ ಉತ್ತಂಗಿ ಕಬ್ಬಿಣ ಕಂತಿ ಮಠದ ಶಾಂತಮ್ಮ ವೀರಯ್ಯ ಟ್ರಸ್ಟ್ ಹಾಗೂ ದಾವಣಗೆರೆಯ ಹೆಸರಾಂತ ಎಸ್.ಎಸ್. ಹೈಟೆಕ್ ಆಸ್ಪತ್ರೆಯ ಸಂಯುಕ್ತಾಶ್ರಯದಲ್ಲಿ ಶಿಬಿರ ಏರ್ಪಡಿಸಲಾಗಿತ್ತು. ಹರಪನಹಳ್ಳಿ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಿಂದ ಆಗಮಿಸಿದ್ದ ನೂರಾರು ಸಾರ್ವಜನಿಕರು ಈ ಶಿಬಿರದ ಸದುಪಯೋಗ ಪಡೆದುಕೊಂಡರು. ಒಟ್ಟು 130ಕ್ಕೂ ಹೆಚ್ಚು ಸಾರ್ವಜನಿಕರು ತಮ್ಮ ಕಣ್ಣಿನ ತಪಾಸಣೆಯನ್ನು ಮಾಡಿಸಿಕೊಂಡರೆ, 60ಕ್ಕೂ ಹೆಚ್ಚು ಜನರು ಹೃದಯ ತಪಾಸಣೆಗೆ ಒಳಗಾಗಿ ಅಗತ್ಯ ವೈದ್ಯಕೀಯ ಸಲಹೆಗಳನ್ನು ಪಡೆದರು. ನೇತ್ರ ತಪಾಸಣೆಯ ಸುದೀರ್ಘ ಪರಿಶೀಲನೆಯ ನಂತರ 55 ರೋಗಿಗಳಿಗೆ ಕಣ್ಣಿನ ಶಸ್ತ್ರಚಿಕಿತ್ಸೆಯ ಅಗತ್ಯವಿದೆ ಎಂದು ವೈದ್ಯರ ತಂಡವು ದೃಢಪಡಿಸಿತು. ಈ ಹಿನ್ನೆಲೆಯಲ್ಲಿ ಶಿವಮೊಗ್ಗದ ಶಂಕರ ಕಣ್ಣಿನ ಆಸ್ಪತ್ರೆಯ ಸಿಬ್ಬಂದಿಯವರು ಆ ಎಲ್ಲಾ 55 ಫಲಾನುಭವಿಗಳನ್ನು ಉಚಿತ ಶಸ್ತ್ರಚಿಕಿತ್ಸೆಗಾಗಿ ಶಿವಮೊಗ್ಗದ ತಮ್ಮ ಆಸ್ಪತ್ರೆಗೆ ಕರೆದೊಯ್ದರು. ಈ ಸಂದರ್ಭದಲ್ಲಿ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಕೆ.ಕೊಟ್ರೇಶ್ವರ, ಸದಸ್ಯರಾದ ವೀರಭದ್ರಯ್ಯ, ಆರುಂಡಿ ನಾಗರಾಜ, ಪ್ರಾಚಾರ್ಯರಾದ ಡಾ. ಎಸ್. ಎಂ.ಸಿದ್ದಲಿಂಗಮೂರ್ತಿ, ಡಾ.ಶರತ್, ಎನ್‌ಎಸ್‌ಎಸ್ ಅಧಿಕಾರಿಗಳಾದ ನವಾಜ್ ಬಾಷಾ, ಡಾಅಣ್ಣೇಶ, ಎನ್ಸಿಸಿ ಅಧಿಕಾರಿ ಬಸವಲಿಂಗಪ್ಪ, ಸೇರಿದಂತೆ ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

## ಎಂ.ಪಿ.ರವೀಂದ್ರ ಅಭಿಮಾನಿ ಎನ್.ಶಂಕರ್ ನಿಧನ, ಗಣ್ಯರಿಂದ ತೀವ್ರ ಸಂತಾಪ,

ಹರಪನಹಳ್ಳಿ: ಮಾಜಿ ಶಾಸಕ ದಿ.ಎಂ.ಪಿ.ರವೀಂದ್ರ ಅಭಿಮಾನಿ, ಕಾಂಗ್ರೆಸ್ ಕಾರ್ಯಕರ್ತ ಪಟ್ಟಣದ ತೆಲುಗರ ಓಣಿ ನಿವಾಸಿ ಎನ್.ಶಂಕರ್ (49) ಮಂಗಳವಾರ ಹೃದಯಾಘಾತದಿಂದ ನಿಧನರಾದರು.



ಮೃತ ಎನ್.ಶಂಕರ್ ಅವರು ಸ್ಥಳೀಯ ಸಾರ್ವಜನಿಕ ಆಸ್ಪತ್ರೆಯ ಆರೋಗ್ಯ ಸಲಹಾ ಸಮಿತಿ ಸದಸ್ಯರಾಗಿ, ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಎಸ್ಡಿಎಂಸಿ ಮಾಜಿ ಕಾರ್ಯಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಮೃತರಿಗೆ ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಸಂತಾಪ: ಸ್ಥಳೀಯ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಚಿಗಟೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಕುಬೇರಗೌಡ, ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ಕನಕಬಸ್ಸಾಪುರ ಮಂಜುನಾಥ, ಮಾಜಿ ಅಧ್ಯಕ್ಷ ಲಾಟಿ ದಾದಪೀರ, ಎಂ.ಪಿ.ವೀಣಾ ಮಹಾಂತೇಶ, ಮುಖಂಡರಾದ ಚಿಕ್ಕೇರಿ ಬಸಪ್ಪ, ಎಚ್.ವಸಂತಪ್ಪ, ಗುಡಿ ನಾಗರಾಜ, ಮೈದೂರು ರಾಮಣ್ಣ, ದೇವೇಂದ್ರಗೌಡ, ಉದ್ದಾರ ಗಣೇಶ, ಆರ್.ಶಶಿಕುಮಾರನಾಯ್ಕ್, ಅಗ್ರಹಾರ ರವಿ, ಹಾಲೇಶ, ಗುಡೇಕೋಟೆ ಅಂಜಿನಪ್ಪ, ಎಲ್.ಎಂ.ಮಂಜ್ಯಾನಾಯ್ಕ್, ಕೂಲ್ ಇರ್ಫಾನ್, ನದೀಮ್, ಜಿ.ಈರಮ್ಮ ಸೇರಿದಂತೆ ಸವಿತಾ ಸಮಾಜದ ಮುಖಂಡರು ಮೃತರಿಗೆ ತೀವ್ರ ಸಂತಾಪ ಸೂಚಿಸಿದ್ದಾರೆ.

## ಋತುಮಾನದ ಇನ್ಫ್ಲೂಲಯೆಂಜಾ ಜ್ವರವು ಸಾಂಕ್ರಾಮಿಕ ರೋಗವಾಗಿದ್ದು, ಮುನ್ನೆಚ್ಚರಿಕೆ ವಹಿಸಿ : ಡಾ॥ ಲಿಂಗರಾಜು

ಹೊಸಪೇಟೆ: ಋತುಮಾನದ ಇನ್ಫ್ಲೂಲಯೆಂಜಾ ಜ್ವರವು ಸಾಂಕ್ರಾಮಿಕ ರೋಗವಾಗಿದ್ದು, ಇದು ಗಂಭೀರ ಪರಿಣಾಮ ಉಂಟು ಮಾಡಬಹುದು ಹಾಗಾಗಿ ಸಾಂಕ್ರಾಮಿಕ ರೋಗದ ಬಗ್ಗೆ ನಿರ್ಲಕ್ಷ್ಯವಹಿಸದೇ ಮುನ್ನೆಚ್ಚರಿಕೆ ಕ್ರಮ ವಹಿಸಿ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ॥ ಲಿಂಗರಾಜು ಹೇಳಿದರು.



ಸಾಂಕ್ರಾಮಿಕ ರೋಗದ ಲಕ್ಷಣಗಳು: ಹೆಚ್ಚಿನ ಜ್ವರ, ನಿರಂತರ ಕೆಮ್ಮು, ಗಂಟಲು ನೋವು, ದೇಹದ ನೋವು ಮತ್ತು ಶಕ್ತಿ ಹೀನತೆ, ಚಳಿ ಮತ್ತು ನಡುಕ ಹಾಗೂ ತಲೆನೋವು ಇದರ ಲಕ್ಷಣಗಳಾಗಿದ್ದು, ಸಾರ್ವಜನಿಕರು ಮುನ್ನೆಚ್ಚರಿಕೆಯಾಗಿ ಕೆಲ ಅಂಶಗಳನ್ನು ಕೈಗೊಳ್ಳಬೇಕು ಎಂದರು. ಕೈಗಳನ್ನು ಸಾಬೂನುನಿಂದ ನಿಯಮಿತವಾಗಿ ತೊಳೆಯುವುದು, ಜ್ವರ, ಕೆಮ್ಮು ಇದ್ದರೆ ಜನಸಂದಣಿ ಸ್ಥಳಗಳಲ್ಲಿ ಮಾಸ್ಕ್ ಧರಿಸುವುದು ಮತ್ತು ಸಾಕಷ್ಟು ನೀರು ಕುಡಿಯುವುದು ಮತ್ತು ವಿಶ್ರಾಂತಿ ಪಡೆಯುವುದು, ಜ್ವರ ಅಥವಾ ಉಸಿರಾಟದ ತೊಂದರೆ ತೀವ್ರವಾಗಿದ್ದರೆ ಅಥವಾ 2–3 ದಿನಕ್ಕಿಂತ ಹೆಚ್ಚು ಕಾಲ ಮುಂದುವರಿದರೆ ತಕ್ಷಣ ಹತ್ತಿರದ ಸರ್ಕಾರಿ ಆಸ್ಪತ್ರೆಯ ವೈದ್ಯರನ್ನು ಸಂಪರ್ಕಿಸಬೇಕು. ವಿಶೇಷವಾಗಿ ಗಂಭೀರ ಹಾಗೂ ಹೆಚ್ಚಿನ ಅಪಾಯದ ರೋಗಿಗಳು ಸೂಕ್ತ ವೈದ್ಯಕೀಯ ಮೌಲ್ಯಮಾಪನ ಮತ್ತು ಚಿಕಿತ್ಸೆಗೆ ಆರೋಗ್ಯ ಸಂಸ್ಥೆಯನ್ನು ಸಂಪರ್ಕಿಸಬೇಕು.

ಋತುಮಾನದ ಇನ್ಫ್ಲೂ ಲಯೆಂಜಾ ಪ್ರಕರಣಗಳ ಶೀಘ್ರ ಪತ್ತೆ, ಸಮಯೋಚಿತ ಚಿಕಿತ್ಸೆ ಹಾಗೂ ಪರಿಣಾಮಕಾರಿ ನಿಯಂತ್ರಣಕ್ಕಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾ ಘಟಕ, ತಾಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಖಾಸಗಿ ಆರೋಗ್ಯ ಸಂಸ್ಥೆಗಳೊಂದಿಗೆ ನಿರಂತರ ಸಮನ್ವಯದಲ್ಲಿ ಕಾರ್ಯನಿರ್ವಹಿಸುತ್ತಿದೆ. ಏನು ಮಾಡಬಾರದು: ಕಣ್ಣು, ಮೂಗು ಮತ್ತು ಬಾಯಿಯನ್ನು ಕೈಗಳಿಂದ ಪದೇಪದೇ ಮುಟ್ಟಬಾರದು, ಸ್ವಯಂ–ಔಷಧೋಪಚಾರ ಮಾಡಬಾರದು, ರೋಗಲಕ್ಷಣಗಳಿರುವ ಸಂದರ್ಭದಲ್ಲಿ ಕೈಕುಲುಕುವುದನ್ನು ತಪ್ಪಿಸಬೇಕು, ರೋಗಲಕ್ಷಣಗಳಿರುವಾಗ ಜನಸಂದಣಿ ಇರುವ ಸ್ಥಳಗಳಿಗೆ ತೆರಳಬಾರದು.

ಬಳಸಿದ ಕರವಸ್ತ್ರ, ನ್ಯಾಪ್ಕಿನ್‌ಗಳ ಮರುಬಳಕೆ ಮಾಡಬಾರದು, ಇನ್ಫ್ಲೂ ಲಯೆಂಜಾ ಸಂಬಂಧಿತ ರೋಗಲಕ್ಷಣಗಳು ಕಂಡುಬಂದಲ್ಲಿ ಸಮೀಪದ ಸರ್ಕಾರಿ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ವೈದ್ಯಕೀಯ ಸಲಹೆ ಪಡೆಯಬೇಕು ಎಂದು ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

## ಹುಲಿಗಿಯಲ್ಲಿ ಮಲ್ಲಿಗೆ ಬೆಳೆಯ ಕ್ಷೇತ್ರೋತ್ಸವ

ಕೊಪ್ಪಳ: ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಹಾಗೂ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಕೊಪ್ಪಳ ವತಿಯಿಂದ ಸೋಮವಾರದಂದು ಹುಲಿಗಿ ಗ್ರಾಮದ ವೀರೇಶ್ ಬಸವರಾಜ ಬೆನಕಟ್ಟಿರವರ ಮಲ್ಲಿಗೆ ತೋಟದಲ್ಲಿ ಮಲ್ಲಿಗೆ ಬೆಳೆಯ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕ್ಷೇತ್ರೋತ್ಸವದಲ್ಲಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಕೊಪ್ಪಳದ ವಿಸ್ತರಣಾ ಮುಂದಾಳು ಡಾ. ಪಿ. ಆರ್. ಬದರಿ ಪ್ರಸಾದರವರು ಮಲ್ಲಿಗೆ ಬೆಳೆಯಲ್ಲಿ ಮೌಲ್ಯವರ್ಧನೆ ಕುರಿತು ಮಾಹಿತಿ ನೀಡಿದರು. ಈ ಭಾಗದಲ್ಲಿ 500 ಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಮಲ್ಲಿಗೆ ಕೃಷಿ ಮಾಡಲಾಗುತ್ತಿದ್ದು, ಮಲ್ಲಿಗೆ ದರದಲ್ಲಿ ಹೆಚ್ಚಿನ ಏರಿಳಿತಗಳಾಗುವುದರಿಂದ ರೈತ–ರಿಗೆ ನಿಖರವಾದ ಆದಾಯ ದೊರೆಯದೇ ಇರುವುದು ಕಂಡುಬಂದಿರುತ್ತದೆ. ಇದಕ್ಕಾಗಿ ಮೌಲ್ಯವರ್ಧನೆ ಮಾಡುವುದರ ಮೂಲಕ ಹೆಚ್ಚಿನ ಲಾಭವನ್ನು ಪಡೆಯಬಹುದು ಎಂದರು.

ಹೂವಿನ ಮಾಲೆಕಟ್ಟುವ ಯಂತ್ರ ಮತ್ತು ಸುಗಂಧ ದ್ರವ್ಯವನ್ನು ತಯಾರಿಸುವ ಘಟಕದ ಬಗ್ಗೆ ಮಾಹಿತಿ ನೀಡುತ್ತಾ ಆಸಕ್ತ ರೈತರು ಕೇಂದ್ರಕ್ಕೆ ಬಂದಲ್ಲಿ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂ–ರಿನ ತೋಟಗಾರಿಕೆ ವಿಜ್ಞಾನಿಗಳು ಅಥವಾ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಬೆಂಗಳೂರಿನ ವಿಜ್ಞಾನಿಗಳನ್ನು ಕರೆಸಿ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು. ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಕ್ಕೆ ಭೇಟಿ ನೀಡಲು ಕರೆ ನೀಡಿದರು. ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕರಾದ ಶ್ರೀನಿವಾಸ ಕುಲಕರ್ಣಿ ಅವರು ಮಾತನಾಡಿ, ಈ ಭಾಗದಲ್ಲಿ ನೀರಾವರಿ ಸೌಲಭ್ಯವಿದ್ದು, ನೀವೆಲ್ಲಾ ತುಂಗಭದ್ರಾ ಅಣೆಕಟ್ಟಿಗೆ ತುಂಬಾ ಹತ್ತಿರದಲ್ಲಿರುವುದರಿಂದ ಯಶಸ್ವಿಯಾಗಿ ಮೀನು ಸಾಕಾಣಿಕೆ ಮಾಡಬಹುದು ಎಂದು ತಿಳಿಸಿದರು ಹಾಗೂ ಮೀನು ಸಾಕಾಣಿಕೆ ಮಾಡಲು ಇಲಾಖೆಯಲ್ಲಿರುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ಈ ಒಂದು ಕ್ಷೇತ್ರೋತ್ಸವದ ಮೂಲಕ ಹೆಚ್ಚಿನ ರೈತರು ಪುಷ್ಪ ಕೃಷಿಯಲ್ಲಿ ತೊಡಗಿಸಬೇಕೆಂಬುದು ನಮ್ಮ ಉದ್ದೇಶವಾಗಿದೆ ಎಂದು ತಿಳಿಸಿದರು. ಪ್ರಗತಿಪರ ರೈತರಾದ ವೀರೇಶರವರು ಮಾತನಾಡಿ, "ಐದಾರು ವರ್ಷಗಳಿಂದ ನಾನು ಮಲ್ಲಿಗೆ ಕೃಷಿ ಮಾಡುತ್ತಿದ್ದು, ಅತಿ ಹೆಚ್ಚಿನ ಆಳಿನ ಬೇಡಿಕೆ ಇರುವ ಈ ಬೆಳೆ ಮಾಡಬೇಕಾದಲ್ಲಿ ಆಳುಗಳ ಲಭ್ಯತೆಯನ್ನು ನೋಡಿಕೊಂಡು ಮಾಡಬೇಕು. ಬೇರೆ ಬೇರೆ ಉದ್ಯಮವಿರುವ ಮತ್ತು ಭತ್ತ ಕೃಷಿ ಮಾಡುವ ನಾನು, ನನ್ನ ತೋಟವನ್ನು ಸಣ್ಣ ಸಣ್ಣ ಭಾಗಗಳಾಗಿ ವಿಂಗಡಿಸಿ ಕೂಲಿ ಆಳುಗಳಿಗೆ ಹಂಚಿಕೊಂಡಿರುತ್ತೇನೆ. ಇದರಿಂದಾಗಿ ಗ್ರಾಮದ ಮಹಿಳೆಯರಿಗೆ ಉದ್ಯೋಗವನ್ನು ಕೊಟ್ಟಂತಾಗುತ್ತದೆ ಮತ್ತು ಕೂಲಿ ಆಳುಗಳ ನಿರ್ವಹಣೆ ಸುಲಭವಾಗಿ ನನಗೆ ಉತ್ತಮ ಲಾಭ ಬರುತ್ತಿದೆ ಎಂದು ತಿಳಿಸಿದರು. ಮಲ್ಲಿಗೆ ಬೇಸಾಯ ಕ್ರಮಗಳು ಹಾಗೂ ಮಾರುಕಟ್ಟೆ ಕುರಿತು ಮಾಹಿತಿ ನೀಡಿದರು.

ಮಲ್ಲಿಗೆ ಬಿಡಿಸುವ ಕೂಲಿಕಾರರಾದ ಈರಮ್ಮ ಹಾಗೂ ರುದ್ರಮ್ಮ ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾ, ನಾವು ಪ್ರತಿದಿನವೂ ಸುಮಾರು ನಾಲ್ಕು ಕೆ.ಜಿ. ಅಷ್ಟು ಮೊಗ್ಗನ್ನು ಬಿಡಿಸುವುದರ ಮೂಲಕ ಮೊಗ್ಗಿನ ದರದ ಆಧಾರದ ಮೇಲೆ ರೂ.500 ರಿಂದ ರೂ.2000 ವರೆಗೆ ಪ್ರತಿದಿನ ಸಂಪಾದಿಸುತ್ತೇವೆ ಎಂದು ತಿಳಿಸಿದರು.

ನಮ್ಮಲ್ಲಿ ಉದ್ಯೋಗ ಖಾತ್ರಿ ಕಾರ್ಡ್ ಇದ್ದರೂ ಕೂಡ ಮಲ್ಲಿಗೆ ಹೂವಿನ ಕಟಾವಿರುವವರೆಗೆ ನಾವು ಉದ್ಯೋಗಖಾತ್ರಿ ಕೆಲಸಕ್ಕೆ ಹೋಗುವುದಿಲ್ಲ. ಆದ–ರೆ ಮಾರ್ಚ್ ತಿಂಗಳಿನ ನಂತರ ಮಲ್ಲಿಗೆ ಹೂವಿನ ಇಳುವರಿ ಕಡಿಮೆಯಾದಾಗ ಉದ್ಯೋಗವನ್ನು ಅರಸಿಕೊಂಡು ಹೋಗುತ್ತೇವೆ ಎಂಬ ಮಾಹಿತಿಯನ್ನು ನೀಡಿದರು. ಹೂವಿನ ಖರೀದಿದಾರರಾದ ಶರಣಪ್ಪ ಅವರು ಹೊಸಪೇಟೆಯಲ್ಲಿನ ಹೂವಿನ ಮಾರುಕಟ್ಟೆ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರಾದ ನಾಗರಾಜು, ಅಭಿಷೇಕ, ಪರಮೇಶ್ವರಪ್ಪ, ಬಸವರಾಜ ಬ್ಯಾಳಿ ಅಲ್ಲದೆ ಅನೇಕ ರೈತರು ಮತ್ತು ರೈತ ಮಹಿಳೆಯರು ಉಪಸ್ಥಿತರಿದ್ದರು.

## ವಿವಿಧ ಯೋಜನೆಗೆ ಅರ್ಜಿ ಅಹ್ವಾನ

ಹೊಸಪೇಟೆ: ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮದಿಂದ 2026–27ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಅಭಿವೃದ್ಧಿ ಯೋಜನೆ ಮತ್ತು ಸಾಲ ಸೌಲಭ್ಯಗಳನ್ನು ಪಡೆಯಲು ಕ್ರಿಶ್ಚಿಯನ್ ಸಮುದಾಯದ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 30 ಕೊನೆಯ ದಿನವಾಗಿದೆ. ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮದಿಂದ ಅರಿವು ವಿದ್ಯಾಭ್ಯಾಸ ಸಾಲ ಯೋಜನೆಯಡಿ ಸಿಇಟಿ, ನೀಟ್, ಜೆಇಇ, ಸಿಎಲ್‌ಎ ಮುಂತಾದ ಪ್ರವೇಶ ಪರೀಕ್ಷೆಗಳ ಮೂಲಕ ಆಯ್ಕೆಯಾಗುವ ಮತ್ತು ರಾಷ್ಟ್ರೀಯ, ರಾಜ್ಯ ಮಟ್ಟದಲ್ಲಿ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ವಿವಿಧ ಪದವಿ, ಸ್ನಾತಕೋತ್ತರ ಪದವಿ, ಪಿಎಚ್‌ಡಿ, ಐಟಿಐ, ಡಿಪ್ಲೋಮಾ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬಡ್ಡಿರಹಿತ ಸಾಲ ಸೌಲಭ್ಯ ದೊರೆಯಲಿದೆ. (ಸರ್ಕಾರಿ, ಮ್ಯಾನೇಜ್ಮೆಂಟ್ ಹಾಗೂ ಖಾಸಗಿ ಸೀಟುಗಳಿಗೂ ಇದು ಅನ್ವಯಿಸುತ್ತದೆ). ಸ್ವ–ಸಹಾಯ ಗುಂಪುಗಳ ಸ್ವಯಂ ಉದ್ಯೋಗ ಚಟುವಟಿಕೆಗೆ ಬ್ಯಾಂಕ್‌ಗಳಿಂದ ಪಡೆಯುವ ಸಾಲಕ್ಕೆ ಘಟಕವೆಚ್ಚದ ಶೇ. 50 ಅಥವಾ ಗರಿಷ್ಠ ರೂ.2.00 ಲಕ್ಷ ಬ್ಯಾಕ್ ಎಂಡ್ ಸಬ್ಸಿಡಿ ನೀಡಲಾಗುವುದು. ಮಾನ್ಯತೆ ಪಡೆದ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆಯಲು ರೂ.20 ಲಕ್ಷದವರೆಗೆ ಬಡ್ಡಿರಹಿತ ಸಾಲ ಸಿಗಲಿದ್ದು, ಕೋರ್ಸ್ ಪೂರ್ಣಗೊಂಡ 6 ತಿಂಗಳ ನಂತರ 60 ಕಂತುಗಳಲ್ಲಿ ಮರುಪಾವತಿಸಲು ಅವಕಾಶವಿದೆ (2% ಸೇವಾ ಶುಲ್ಕ ಅನ್ವಯ). 10 ವರ್ಷ ಮೇಲ್ಪಟ್ಟ ಚರ್ಚ್‌ಗಳ ದುರಸ್ಥಿಗೆ ಗರಿಷ್ಠ ರೂ.50.00 ಲಕ್ಷ, ಆವರಣ ಗೋಡೆ ನಿರ್ಮಾಣಕ್ಕೆ ಗರಿಷ್ಠ ರೂ.25.00 ಲಕ್ಷ, ಸ್ಮಶಾನಗಳ ಅಭಿವೃದ್ಧಿ, ಆವರಣ ಗೋಡೆಗೆ ಗರಿಷ್ಠ ರೂ.30.00 ಲಕ್ಷ ಹಾಗೂ ಸಮುದಾಯ ಭವನ ನಿರ್ಮಾಣಕ್ಕೆ ರೂ.50.00 ಲಕ್ಷದಿಂದ ರೂ.1.00 ಕೋಟಿವರೆಗೆ ಅನುದಾನ ನೀಡಲಾಗುವುದು. ಎಚ್‌ಐವಿ ಪೀಡಿತರು, ವಿಶೇಷಚೇತನರು, ಅನಾಥರು ಮತ್ತು ವೃದ್ಧರ ಆಶ್ರಮ ಕೇಂದ್ರಗಳನ್ನು ನಡೆಸುತ್ತಿರುವ ಅರ್ಹ ಸ್ವಯಂಸೇವಾ ಸಂಸ್ಥೆಗಳಿಗೆ ಗರಿಷ್ಠ ರೂ.8.00 ಲಕ್ಷದವರೆಗೆ ಸಹಾಯಧನ ಮಂಜೂರು ಮಾಡಲಾಗುವುದು. ಹಾಗೂ ಸ್ವಯಂ ಉದ್ಯೋಗಕ್ಕಾಗಿ ಸುಸಜ್ಜಿತ ಫಾಸ್ಟ್ ಫುಡ್ ಟ್ರಕ್, ಮೊಬೈಲ್ ಅಡುಗೆಮನೆ ಯೋಜನೆ ಸಹಾಯಧನ ನೀಡಲಾಗುವುದು. ಅರ್ಹ ಅಭ್ಯಾರ್ಥಿಗಳು ಜಿಲ್ಲೆಯಲ್ಲಿ ಕನಿಷ್ಠ 15 ವರ್ಷಗಳ ಖಾಯಂ ನಿವಾಸಿಯಾಗಿರಬೇಕು. ಕುಟುಂಬದ ವಾರ್ಷಿಕ ಆದಾಯ 6 ಲಕ್ಷ ಮೀರಿರಬಾರದು. 18 ರಿಂದ 55 ವರ್ಷ ಒಳಗಿರಬೇಕು. ಶೇ. 33 ರಷ್ಟು ಮಹಿಳೆಯರಿಗೆ ಹಾಗೂ ಶೇ. 3 ರಷ್ಟು ವಿಶೇಷಚೇತನ–ರಿಗೆ ಮೀಸಲಾತಿ ಇರುತ್ತದೆ. ಈ ಹಿಂದೆ ನಿಗಮದಿಂದ ಸೌಲಭ್ಯ ಪಡೆದವರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. ಅರ್ಹ ಅಭ್ಯರ್ಥಿಗಳು ಇಲಾಖೆ ಅಧಿಕೃತ ಜಾಲಾತಣ https://kmc-dconline.karnataka.gov.in/ ದ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರ ಕಛೇರಿ, ಕರ್ನಾಟಕ ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿ ನಿಗಮ (ನಿ), 1ನೇ ಮಹಡಿ, ಮೌಲಾನ ಆಜಾದ್ ಭವನ, ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರ, ಬಳ್ಳಾರಿ ದೂರವಾಣಿ ಸಂಖ್ಯೆ: 08392–294370 ಗೆ ಸಂಪಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

Publisher and Owned by CHANDRAKANTA From Near Durgamma Temple Dyampur, Koppal District- 583232 Printed at VINAYA Printers, VINAYA Publication Word No.01 Ballary Pootwer, Bhagynagar, Koppal- 583238, Editor : CHANDRAKANTA enammadhruthinews@gmail.com